ಜೆಎಸ್‌ಎಸ್ ಮಹಾವಿದ್ಯಾಪೀಠ

# ಗುಂಡ್ಲುಪೇಟೆ ತಾಲ್ಲೂಕು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ

# 26ನೇ ಅಭಿವೃದ್ಧಿ ಸಮಿತಿ ಸಭೆ

# ಕಾರ್ಯಸೂಚಿ

# ಮತ್ತು

# ಟಿಪ್ಪಣಿಗಳು

ದಿನಾಂಕ: **15.11.2021** ಸಮಯ: ಬೆಳಗ್ಗೆ **11.00** ಕ್ಕೆ

ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ಬರಗಿ

# ಗುಂಡ್ಲುಪೇಟೆ ತಾಲ್ಲೂಕು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ
# 26ನೇ ಅಭಿವೃದ್ಧಿ ಸಮಿತಿ ಸಭೆ

## ಕಾರ್ಯಸೂಚಿ

1. ಸ್ವಾಗತ
2. ಹಿಂದಿನ ಸಭೆ ನಡವಳಿಗಳನ್ನು ಓದಿ ರೆಕಾರ್ಡ್ ಮಾಡುವುದು
3. ಹಿಂದಿನ ಸಭೆ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮಗಳ ಪರಿಶೀಲನೆ
4. ಪ್ರವೇಶ ದಾಖಲಾತಿ
5. ಫಲಿತಾಂಶ
6. ಪ್ರಗತಿ ಪರಿಶೀಲನೆ
   - A. ಅಧ್ಯಾಪಕರುಗಳ ಸಾಧನೆಗಳು
   - B. ವಿದ್ಯಾರ್ಥಿಗಳ ಸಾಧನೆಗಳು
7. ಮೂಲಭೂತ ಸೌಕರ್ಯಗಳು
8. ಇತರೆ ವರದಿಗಳು
9. ಇತರೆ ವಿಷಯಗಳು

# ಕಾರ್ಯಸೂಚಿ ಮತ್ತು ಅನುಪಾಲನಾ ವರದಿ

## ದಿನಾಂಕ: 15.11.2021 ರಂದು ನಡೆಯುವ ಗುಂಡ್ಲುಪೇಟೆ ತಾಲ್ಲೂಕು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ 26 ನೇ ಅಭಿವೃದ್ಧಿ ಸಮಿತಿ ಸಭೆಯ ಕಾರ್ಯಸೂಚಿ ಮತ್ತು ಅನುಪಾಲನಾ ವರದಿ

**26.1 ಸ್ವಾಗತ**

ದಿನಾಂಕ: 31.07.2021 ರಂದು ನಡೆದ ಗುಂಡ್ಲುಪೇಟೆ ತಾಲ್ಲೂಕು, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿ ಸಮಿತಿ 25 ನೇ ಸಭೆ ನಡವಳಿಗಳನ್ನು ದಿನಾಂಕ: 19.08.2021 ರಂದು ಎಲ್ಲಾ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರುಗಳಿಗೆ ಕಳುಹಿಸಿದ್ದು, ಈ ಬಗ್ಗೆ ಯಾವುದೇ ಸಲಹೆ ಸೂಚನೆಗಳು ಬಂದಿರುವುದಿಲ್ಲ. ನಡವಳಿಗಳನ್ನು ಓದಿ ಅನುಮೋದಿಸುವ ಬಗ್ಗೆ ಮಂಡಿಸಿದೆ.

**26.2 ಹಿಂದಿನ ಸಭೆ ನಡವಳಿಗಳನ್ನು ಓದಿ ರೆಕಾರ್ಡ್ ಮಾಡುವುದು**

**ತೀರ್ಮಾನ:** ದಿನಾಂಕ: 31.07.2021 ರಂದು ಜರುಗಿದ 25 ನೇ ಸಭೆಯ ನಡವಳಿಗಳ ಬಗ್ಗೆ ಯಾರಿಂದಲೂ ಸಲಹೆ ಸೂಚನೆಗಳು ಬಂದಿಲ್ಲದಿರುವುದನ್ನು ಸಭೆಯ ಗಮನಕ್ಕೆ ತಂದು ನಡವಳಿಗಳನ್ನು ಓದಿ ರೆಕಾರ್ಡ್ ಮಾಡಲಾಯಿತು.

**26.3 ಹಿಂದಿನ ಸಭೆಯ ನಡವಳಿಗಳ ಮೇಲೆ ತೆಗೆದುಕೊಂಡ ಕ್ರಮದ ಬಗ್ಗೆ ಪರಿಶೀಲನೆ**

**ತೀರ್ಮಾನ:** ಎಲ್ಲಾ ಸಂಸ್ಥೆಗಳಿಂದ ಬಂದಿರುವ ಅನುಪಾಲನಾ ವರದಿಗಳನ್ನು ಆಧರಿಸಿ ಆಯಾಯಾ ವಿಷಯಗಳಡಿ ತೆಗೆದುಕೊಂಡಿರುವ ಕ್ರಮಗಳನ್ನು ವಿವರಿಸಲಾಗಿದೆ.

**26.4 (25.4) ಪ್ರವೇಶ ದಾಖಲಾತಿ ಬಗ್ಗೆ**

**ಹಿಂದಿನ ಸಭೆಯ ತೀರ್ಮಾನ:** ಪ್ರಚಾರ, ಜಾಹೀರಾತು, ಕರಪತ್ರಗಳನ್ನು ಹಂಚುವುದು, ಶಾಲೆಯಲ್ಲಿರುವ ಸೌಕರ್ಯಗಳು ಹಾಗೂ ಗುಣಮಟ್ಟ ಶಿಕ್ಷಣದ ಬಗ್ಗೆ ಅರಿವು ಮೂಡಿಸುವುದು, ಮನೆ ಮನೆಗಳಿಗೆ ಹೋಗಿ ವಿದ್ಯಾರ್ಥಿಗಳ ಪೋಷಕರನ್ನು ಭೇಟಿ ಮಾಡಿ ದಾಖಲಾತಿ ಹೆಚ್ಚಿಸಲು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಕ್ರಮಕೈಗೊಳ್ಳಬೇಕೆಂದು ತೀರ್ಮಾನಿಸಲಾಯಿತು.

**ಕೈಗೊಂಡಿರುವ ಕ್ರಮಗಳು**

1. **ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ**

2021-22 ನೇ ಶೈಕ್ಷಣಿಕ ಸಾಲಿಗೆ ದಾಖಲಾತಿ ಹೆಚ್ಚಿಸಲು ಅಧ್ಯಾಪಕರುಗಳನ್ನು ಗುಂಡ್ಲುಪೇಟೆ ತಾಲ್ಲೂಕಿನ ವಿವಿಧ ಪದವಿಪೂರ್ವ ಕಾಲೇಜುಗಳಿಗೆ ನಿಯೋಜನೆ ಮಾಡಿ ಕಾಲೇಜಿನ ಮೂಲಭೂತ ಸೌಲಭ್ಯಗಳು, ಕೋರ್ಸ್‌ಗಳು, ಶೈಕ್ಷಣಿಕ ಗುಣಮಟ್ಟ, ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ನೀಡುತ್ತಿರುವ ವಿಷಯಗಳನ್ನು ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು. ಮತ್ತು ಕರ ಪತ್ರಗಳನ್ನು ಹಂಚುವುದು, ಪಟ್ಟಣದ ಮುಖ್ಯ ರಸ್ತೆಗಳಲ್ಲಿ ಬ್ಯಾನರ್‌ಗಳನ್ನು ಹಾಕಿಸುವ ಮುಖಾಂತರ ಪ್ರಚಾರ ಕಾರ್ಯಕ್ರಮಗಳನ್ನು ಕ್ರಮಕೈಗೊಳ್ಳಲಾಗಿತ್ತು. ಪ್ರಸಕ್ತ ಸಾಲಿನಲ್ಲಿ ದಾಖಲಾಗಿರುವ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ.

## 2020-21 ಹಾಗೂ 2021-22ನೇ ಸಾಲುಗಳ ದಾಖಲಾತಿ ವಿವರ

| Course | Combination | Intake | 2020-21 No. of Admission | 2021-22 No. of Admission |
|---|---|---|---|---|
| I B.A | HEP | 90 | 19 | 25 |
| | HEG | 90 | 31 | 22 |
| | KEG/KEP | 90 | 16 | 7 |
| | **Total** | **270** | **66** | **54** |
| II B.A | HEP | - | 17 | 18 |
| | HEG | - | 23 | 29 |
| | KEG/KEP | - | 12 | 13 |
| | | **Total** | **52** | **60** |
| III B.A | HEP | - | 16 | 15 |
| | HEG | - | 24 | 20 |
| | KEG/KEP | - | 15 | 10 |
| | | **Total** | **55** | **45** |
| I B.Com | Compulsory Subjects | 120 | 89 | 94 |
| II B.Com | | - | 115 | 79 |
| III B.Com | | - | 105 | 104 |
| | **Total** | **120** | **309** | **277** |
| | **Grand Total** | **390** | **482** | **436** |

### 2. ಜೆಎಸ್ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಗುಂಡ್ಲುಪೇಟೆ

2021-22ನೇ ಶೈಕ್ಷಣಿಕ ಸಾಲಿನ ದ್ವಿತೀಯ ಪಿಯುಸಿ ದಾಖಲಾತಿಯು ಕೋವಿಡ್-19ರ ಹಿನ್ನೆಲೆಯಲ್ಲಿ ದಿನಾಂಕ:15.07.2021 ರಿಂದ ಪ್ರಾರಂಭವಾಗಿರುತ್ತದೆ.

2021-22ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಪಿಯುಸಿ ಭೌತಿಕ ತರಗತಿಗಳು ದಿನಾಂಕ: 23.08.2021 ರಿಂದ ಆರಂಭವಾಗಿ ವಿದ್ಯಾರ್ಥಿಗಳಿಗೆ ಪದವಿಪೂರ್ವ ಶಿಕ್ಷಣ ಇಲಾಖೆಯ ಆದೇಶದಂತೆ ಕೋವಿಡ್-19ರ SOP ನಿಯಮಗಳನ್ನು ಪಾಲಿಸಿ ತರಗತಿಗಳನ್ನು ನಡೆಸಲಾಗುತ್ತಿದೆ.

**ದಾಖಲಾತಿ ತುಲನಾತ್ಮಕ ಪಟ್ಟಿ**

| ಕ್ರ.ಸಂ | ವಿಭಾಗ | ಶೈಕ್ಷಣಿಕ ಸಾಲಿನ ಪ್ರವೇಶ ವಿವರ | |
|---|---|---|---|
| | | 2020-21 | 2021-22 |
| 01 | ಪ್ರಥಮ ಪಿಯುಸಿ ಕಲಾ ವಿಭಾಗ | 65 | 35 |
| 02 | ಪ್ರಥಮ ಪಿಯುಸಿ ವಾಣಿಜ್ಯ ವಿಭಾಗ | 80 | 69 |
| 03 | ದ್ವಿತೀಯ ಪಿಯುಸಿ ಕಲಾ ವಿಭಾಗ | 67 | 54 |
| 04 | ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗ | 79 | 77 |
| | ಒಟ್ಟು | **298** | **235** |

3. ಜೆಎಸ್‌ಎಸ್ ಪ್ರೌಢಶಾಲೆ, ಗುಂಡ್ಲುಪೇಟೆ

2021-22ನೇ ಸಾಲಿನಲ್ಲಿ ದಾಖಲಾತಿ ಹೆಚ್ಚಿಸಲು ಜಾಹಿರಾತು, ಕರಪತ್ರಗಳು ಹಂಚುವುದು, ಬ್ಯಾನರ್ ಹಾಕಿಸುವುದು ಹಾಗೂ ವಿವಿಧ ಗ್ರಾಮಗಳಿಗೆ ಭೇಟಿ ನೀಡಲು ಶಿಕ್ಷಕರನ್ನು ನಿಯೋಜಿಸಿ ದಾಖಲಾತಿ ಆಂದೋಲನವನ್ನು ಕೈಗೊಳ್ಳಲಾಯಿತು. ನಮ್ಮ ಶಾಲೆಯಲ್ಲಿ ದಾಖಲಾತಿಯು ಈ ಕೆಳಕಂಡಂತಿದೆ.

**2020–21 ಹಾಗೂ 2021–22ನೇ ಸಾಲುಗಳ ದಾಖಲಾತಿ ವಿವರ**

| ಕ್ರ ಸಂ | ತರಗತಿ | 2020-21 ನೇ ಸಾಲಿನ ದಾಖಲಾತಿ | 2021-22 ನೇ ಸಾಲಿನಲ್ಲಿದ್ದ ದಾಖಲಾತಿ |
|---|---|---|---|
| 01 | 8 ನೆ ತರಗತಿ | 32 | 26 |
| 02 | 9 ನೆ ತರಗತಿ | 42 | 53 |
| 03 | 10 ನೆ ತರಗತಿ | 50 | 46 |
| ಒಟ್ಟು | | **124** | **125** |

4. ಜೆಎಸ್‌ಎಸ್ ಪ್ರೌಢಶಾಲೆ, ಬರಗಿ

- ದಿನಾಂಕ: 15.06.2021 ರಿಂದ ದಾಖಲಾತಿ ಹೆಚ್ಚಿಸಲು ಶಿಕ್ಷಕರು ಫೀಡಿಂಗ್ ಶಾಲೆಗಳು ಮತ್ತು ವಿದ್ಯಾರ್ಥಿಗಳ ಮನೆಗಳಿಗೆ ಭೇಟಿ ಕೊಟ್ಟು ಶಾಲೆಯಲ್ಲಿ ದೊರೆಯುವ ಸೌಲಭ್ಯಗಳನ್ನು ಮನವರಿಕೆ ಮಾಡಿಕೊಡಲಾಯಿತು.
- ಶಾಲೆಯಲ್ಲಿ ದೊರೆಯುವ ಸೌಲಭ್ಯಗಳು & ದಾಖಲಾತಿ ಆಂದೋಲನ ಫ್ಲೆಕ್ಸ್‌ಗಳನ್ನು ಮಾಡಿಸಿ ಪ್ರಚಾರ ಮಾಡಲಾಯಿತು.

**2020-21 ಮತ್ತು 2021-22ನೇ ಸಾಲುಗಳ ದಾಖಲಾತಿ ವಿವರ**

| ವರ್ಷ | 8ನೇ ತರಗತಿ | 9ನೇ ತರಗತಿ | 10ನೇ ತರಗತಿ | ಒಟ್ಟು |
|---|---|---|---|---|
| 2020-21 | 57 | 54 | 63 | **174** |
| 2021-22 | 36 | 74 | 54 | **164** |

5. ಜೆಎಸ್‌ಎಸ್ ಪ್ರೌಢಶಾಲೆ, ತೆರಕಣಾಂಬಿ

**2020-21 ಮತ್ತು 2021-22ನೇ ಸಾಲುಗಳ ದಾಖಲಾತಿ ವಿವರ**

| ವರ್ಷ | 8ನೇ ತರಗತಿ | 9ನೇ ತರಗತಿ | 10ನೇ ತರಗತಿ | ಒಟ್ಟು |
|---|---|---|---|---|
| 2020-21 | 29 | 24 | 35 | 88 |
| 2021-22 | 31 | 31 | 25 | 87 |

6. ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆ, ತೆರಕಣಾಂಬಿ

**2020-21 ಮತ್ತು 2021-22ನೇ ಸಾಲುಗಳ ದಾಖಲಾತಿ ವಿವರ**

| ವರ್ಷ | ಪ್ರಥಮ I | ಪ್ರಥಮ II | ಪ್ರಥಮ III | ಒಟ್ಟು |
|---|---|---|---|---|
| 2020-21 | **29** | **24** | **35** | **88** |
| 2021-22 | **31** | **31** | **25** | **87** |

7. ಜೆಎಸ್‌ಎಸ್ ಬಾಲಜಗತ್, ಬಾಚಹಳ್ಳಿ

**2020-21 ಮತ್ತು 2021-22ನೇ ಸಾಲುಗಳ ದಾಖಲಾತಿ ವಿವರ**

| ಕ್ರ ಸಂ | ತರಗತಿ | 2020-21ನೇ ಸಾಲಿನಲ್ಲಿದ್ದ ದಾಖಲಾತಿ | 2021-22ನೇ ಸಾಲಿನ ದಾಖಲಾತಿ |
|---|---|---|---|
| 01 | ಎಲ್.ಕೆ.ಜಿ | 09 | 05 |
| 02 | ಯು.ಕೆ.ಜಿ | 12 | 07 |
| ಒಟ್ಟು | | **21** | **12** |

ದಾಖಲಾತಿ ಹೆಚ್ಚಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿದೆ.

- ದಾಖಲಾತಿ ಹೆಚ್ಚಿಸಲು ಶಿಕ್ಷಕರು ವಿದ್ಯಾರ್ಥಿಗಳ ಮನೆಗಳಿಗೆ ಮತ್ತು ಅಕ್ಕ-ಪಕ್ಕದ ಗ್ರಾಮಗಳಿಗೆ ಭೇಟಿಕೊಟ್ಟು ಶಾಲೆಯಲ್ಲಿ ದೊರೆಯುವ ಸೌಲಭ್ಯಗಳನ್ನು ಪೋಷಕರಿಗೆ ಮನವರಿಕೆ ಮಾಡಿ ಶಾಲೆಗೆ ದಾಖಲು ಮಾಡಲು ತಿಳಿಸಲಾಯಿತು.
- ಶಿಕ್ಷಕರು ಆನ್‌ಲೈನ್‌ನಲ್ಲಿ ಕಳುಹಿಸುವ ಚಟುವಟಿಕೆ, ನೋಟ್ಸ್ ಮತ್ತು ಗೃಹಪಾಠಗಳನ್ನು ವಿದ್ಯಾರ್ಥಿಗಳು ನೋಟ್ಸ್‌ನಲ್ಲಿ ಬರೆಯಿಸಲಾಗುತ್ತಿದೆ. ಹಾಗೂ ಮನೆ-ಮನೆಗೆ ಭೇಟಿ ನೀಡಲಾಗುತ್ತಿದೆ.

8. ಶ್ರೀ ಮದ್ದಾನೇಶ್ವರ (ಜೆಎಸ್‌ಎಸ್) ಪ್ರೌಢಶಾಲೆ, ಪಡಗೂರು

- 2021-22ನೇ ಸಾಲಿನಲ್ಲಿ ಶೈಕ್ಷಣಿಕ ದಾಖಲಾತಿ ಉತ್ತಮವಾಗಿದೆ.
- ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಹಿರಿಯ ವಿದ್ಯಾರ್ಥಿಗಳು, ಹಾಲಿ ವಿದ್ಯಾರ್ಥಿಗಳು, ಪೋಷಕರು ಮತ್ತು ಶಿಕ್ಷಕರ ಪರಿಶ್ರಮದಿಂದ ದಾಖಲಾತಿ ಹೆಚ್ಚಳವಾಯಿತು.

**2020-21 ಮತ್ತು 2021-22ನೇ ಸಾಲುಗಳ ದಾಖಲಾತಿ ವಿವರ**

| ವರ್ಷವಾರು | 8ನೇ ತರಗತಿ | 9ನೇ ತರಗತಿ | 10ನೇ ತರಗತಿ | ಒಟ್ಟು |
|---|---|---|---|---|
| 2020-21 | 44 | 40 | 44 | **128** |
| 2021-22 | 41 | 60 | 40 | **141** |

9. ಜೆಎಸ್‌ಎಸ್ ಪ್ರೌಢಶಾಲೆ, ಹೊರೆಯಾಲ

- 2021-22 ನೇ ಸಾಲಿನಲ್ಲಿ ನಮ್ಮ ಶಾಲೆಯಲ್ಲಿ ಒಟ್ಟು 160 ವಿದ್ಯಾರ್ಥಿಗಳು ದಾಖಲಾಗಿದ್ದಾರೆ.

**2020-21 ಮತ್ತು 2021-22ನೇ ಸಾಲುಗಳ ದಾಖಲಾತಿ ವಿವರ**

| ವರ್ಷ | 8 ನೇ ತರಗತಿ | 9 ನೇ ತರಗತಿ | 10 ನೇ ತರಗತಿ | ಒಟ್ಟು |
|---|---|---|---|---|
| 2020-21 | 64 | 54 | 62 | 180 |
| 2021-22 | 51 | 59 | 50 | 160 |

10. ಜೆಎಸ್‌ಎಸ್ ಪ್ರೌಢಶಾಲೆ, ಕೊಡಸೋಗೆ

2021-22 ನೇ ಶೈಕ್ಷಣಿಕ ಸಾಲಿಗೆ 8ನೇ ತರಗತಿ ದಾಖಲಾತಿಗಾಗಿ ಬರುವ ಪ್ರಾಥಮಿಕ ಶಾಲೆಗಳಿಂದ 7ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿಗಳು 8ನೇ ತರಗತಿಗೆ 27, 9ನೇ ತರಗತಿಗೆ 01 ಮತ್ತು 10ನೇ ತರಗತಿಗೆ 01 ಒಟ್ಟು ಹೊಸದಾಗಿ 29 ಮಕ್ಕಳು ನಮ್ಮ ಶಾಲೆಗೆ ಸೇರಿದ್ದಾರೆ.

**2020-21 ಮತ್ತು 2021-22ನೇ ಸಾಲುಗಳ ದಾಖಲಾತಿ ವಿವರ**

| ತರಗತಿ | 2020-21 | 2021-22 |
|---|---|---|
| 8ನೇ ತರಗತಿ | 30 | 27 |
| 9ನೇ ತರಗತಿ | 30 | 32 |
| 10ನೇ ತರಗತಿ | 25 | 28 |
| ಒಟ್ಟು | **85** | **87** |

**11. ಜೆಎಸ್‌ಎಸ್ ಪ್ರೌಢಶಾಲೆ, ಶಿವಪುರ**

**2020-21 ಮತ್ತು 2021-22ನೇ ಸಾಲುಗಳ ದಾಖಲಾತಿ ವಿವರ**

| ತರಗತಿ | 2020-21 | 2021-22 |
|---|---|---|
| 8 ನೆ ತರಗತಿ | 47 | 49 |
| 9 ನೆ ತರಗತಿ | 48 | 48 |
| 10 ನೆ ತರಗತಿ | 39 | 48 |
| ಒಟ್ಟು | **134** | **145** |

- ದಿನಾಂಕ: 15.06.2021 ರಿಂದ ದಾಖಲಾತಿ ಹೆಚ್ಚಿಸಲು ಶಿಕ್ಷಕರು ವಿದ್ಯಾರ್ಥಿಗಳ ಮನೆಗಳಿಗೆ ಮತ್ತು ಫೀಡಿಂಗ್ ಶಾಲೆಗಳಿಗೆ ಭೇಟಿಕೊಟ್ಟು ಶಾಲೆಯಲ್ಲಿ ದೊರೆಯುವ ಸೌಲಭ್ಯಗಳನ್ನು ಪೋಷಕರು ಮತ್ತು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಲಾಯಿತು.
- ದಾಖಲಾತಿ ಹೆಚ್ಚಿಸುವ ದೃಷ್ಟಿಯಿಂದ ವಿದ್ಯಾರ್ಥಿಗಳಿಗೆ ಉಚಿತ ಬಸ್‌ಪಾಸ್ ಮತ್ತು ಕಡು ಬಡತನದ ಮಕ್ಕಳಿಗೆ ಶಾಲಾ ಶುಲ್ಕ ಮತ್ತು ಆಡಳಿತ ಮಂಡಳಿ ಶುಲ್ಕವನ್ನು ಪಾವತಿಸಲು ಎಲ್ಲಾ ಶಿಕ್ಷಕರು ಸಭೆಯಲ್ಲಿ ಚರ್ಚಿಸಿ ತಿರ್ಮಾನಿಸಲಾಯಿತು.

**12. ಜೆಎಸ್‌ಎಸ್ ಮಹಿಳಾ ವಸತಿ ನಿಲಯ, ಗುಂಡ್ಲುಪೇಟೆ**

**2020-21 ಮತ್ತು 2021-22ನೇ ಸಾಲುಗಳ ದಾಖಲಾತಿ ವಿವರ**

| ವಿವರ | 2020-21 | 2021-22 |
|---|---|---|
| ವಿದ್ಯಾರ್ಥಿಗಳು | - | 02 |
| ಉದ್ಯೋಗಸ್ಥ ಮಹಿಳೆಯರು | 10 | 13 |
| ಒಟ್ಟು | **10** | **15** |

## 26.5 (25.5) ಫಲಿತಾಂಶದ ಬಗ್ಗೆ

**ಹಿಂದಿನ ಸಭೆಯ ತೀರ್ಮಾನ:** 8ನೇ ತರಗತಿಯಿಂದಲೇ ಫಲಿತಾಂಶ ಉತ್ತಮಪಡಿಸುವ ಬಗ್ಗೆ ಕ್ರಮವಹಿಸಬೇಕೆಂದು ಹಾಗೂ ವಿದ್ಯಾರ್ಥಿಗಳು ಯಾವ ವಿಷಯಗಳಲ್ಲಿ ಮತ್ತು ಪಾಠಗಳಲ್ಲಿ ಹಿಂದುಳಿದಿದ್ದಾರೆ ಎಂಬುದನ್ನು ಗುರುತಿಸಿ, ಅವರಿಗೆ ವಿಶೇಷ ತರಗತಿಗಳನ್ನು ನಡೆಸಿ ಫಲಿತಾಂಶ ಉತ್ತಮಪಡಿಸಲು ಕ್ರಮಕೈಗೊಳ್ಳಬೇಕೆಂದು ವಿಷಯ ಪರಿವೀಕ್ಷಕರಾದ ಶ್ರೀ ನಾಗರಾಜುರವರು ಸಭೆಯಲ್ಲಿ ತಿಳಿಸಿರುತ್ತಾರೆ. ಪ್ರಸ್ತುತ ಆನ್‌ಲೈನ್‌ನಲ್ಲಿ ತರಗತಿಗಳು ನಡೆಯುತ್ತಿರುವುದರಿಂದ ವಿದ್ಯಾರ್ಥಿಗಳಿಗೆ ನೋಟ್ಸ್ ಹಾಗೂ ಇತರ ಮಾಹಿತಿಯನ್ನು ವ್ಯಾಟ್ಸ್ ಆಪ್ ಮೂಲಕ ಅವರಿಗೆ ಕಳುಹಿಸಿಕೊಡಲು ತೀರ್ಮಾನಿಸಲಾಯಿತು.

ಕೈಗೊಂಡಿರುವ ಕ್ರಮಗಳು

1. ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ

ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ತರಗತಿಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಪ್ರಶ್ನೆಪತ್ರಿಕೆಗಳ ಪುನರಾವರ್ತನೆ ಮಾಡುವ ಮುಖಾಂತರ ಫಲಿತಾಂಶ ಉತ್ತಮಪಡಿಸಲು ಕ್ರಮಕೈಗೊಳ್ಳಲಾಗಿದೆ. ಆನ್‌ಲೈನ್ ಮೂಲಕ ತರಗತಿಗಳನ್ನು ನಡೆಸಲಾಗಿದ್ದು, ಅಧ್ಯಾಪಕರುಗಳು ತೆರೆದ ಪುಸ್ತಕದ ಟೆಸ್ಟ್, ವಿದ್ಯಾರ್ಥಿಗಳಿಗೆ ನೋಟ್ಸ್ ಹಾಗೂ ಇತರೆ ಮಾಹಿತಿಯನ್ನು ವ್ಯಾಟ್ಸ್ ಆಪ್ ಮೂಲಕ ಕಳುಹಿಸಲಾಗಿದೆ. ಮಾರ್ಚ್/ಏಪ್ರಿಲ್-2021 ರಲ್ಲಿ ನಡೆದ 1, 3 ಮತ್ತು 5ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶ ಹಾಗೂ ಸೆಪ್ಟಂಬರ್/ಅಕ್ಟೋಬರ್-2021 ರಲ್ಲಿ ನಡೆದ 2, 4 ಮತ್ತು 6ನೇ ಸೆಮಿಸ್ಟರ್ ಪರೀಕ್ಷೆಗಳ ಫಲಿತಾಂಶಗಳ ವಿವರ ಈ ಕೆಳಕಂಡಂತಿದೆ.

**ಸೆಪ್ಟಂಬರ್-2020 ರ (Even Semester) ಫಲಿತಾಂಶದ ವಿವರ**

| SL. No. | Class | No. of Appeared | Distinction | I Class | II Class | III Class | Totao No. of Pass | Percentage |
|---|---|---|---|---|---|---|---|---|
| 1 | III B.A | 52 | - | 10 | 4 | 30 | 44 | **84.61** |
| 2 | III B.Com | 132 | 45 | 46 | 3 | 12 | 106 | **80.30** |

**ಮಾರ್ಚ್/ಏಪ್ರಿಲ್-2021 ರ (Add Semester) ಫಲಿತಾಂಶದ ವಿವರ**

| SL. No. | Class | No. of Appeared | Distinction | I Class | II Class | III Class | Totao No. of Pass | Percentage |
|---|---|---|---|---|---|---|---|---|
| 1 | III B.A | 54 | - | - | - | - | 51 | 94.44 |
| 2 | III B.Com | 99 | - | - | - | - | 95 | 95.95 |

**ಮಾರ್ಚ್/ಏಪ್ರಿಲ್-2021 (Add Semester) & ಸೆಪ್ಟಂಬರ್-2020 ರ (Even Semester) ಫಲಿತಾಂಶದ ವಿವರ**

| Class | March/April-2021 | | | Class | September-2020 | | |
|---|---|---|---|---|---|---|---|
| | No. of App. | No. of Pass | (%) | | No. of App. | No. of Pass | (%) |
| I B.A I SS | 65 | 55 | **84.61** | I B.A II SS | 57 | 57 | **100** |
| II B.A III SS | 52 | 41 | **78.84** | II B.A IV SS | 59 | 59 | **100** |
| III B.A V SS | 54 | 51 | **94.44** | III B.A VI SS | 52 | 44 | **84.61** |
| I B.Com I SS | 85 | 65 | **76.47** | I B.Com II SS | 119 | 119 | **100** |
| II B.Com III SS | 114 | 78 | **68.42** | II B.Com IV SS | 105 | 105 | **100** |
| III B.Com V SS | 99 | 95 | **95.95** | III B.Com VI SS | 132 | 106 | **80.30** |

2. ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಗುಂಡ್ಲುಪೇಟೆ

ನಮ್ಮ ಕಾಲೇಜಿನಲ್ಲಿ 2020–21ನೇ ಸಾಲಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ತರಗತಿಯಿಂದ ಒಟ್ಟು 271 ವಿದ್ಯಾರ್ಥಿಗಳು ದಾಖಲಾಗಿದ್ದು, ಪ್ರಥಮ ಪಿಯುಸಿಯಲ್ಲಿ ಒಟ್ಟು 140 ವಿದ್ಯಾರ್ಥಿಗಳಲ್ಲಿ ಎಲ್ಲಾ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿಗೆ ತೇರ್ಗಡೆಯಾಗಿರುತ್ತಾರೆ.

2020–21ನೇ ದ್ವಿತೀಯ ಪಿಯುಸಿಯಲ್ಲಿ ಒಟ್ಟು 131 ವಿದ್ಯಾರ್ಥಿಗಳು ಇಲಾಖೆ ನಿಯಮಾನುಸಾರ ತೇರ್ಗಡೆ ಹೊಂದಿರುತ್ತಾರೆ.

## 2021ರ ದ್ವಿತೀಯ ಪಿ.ಯು.ಸಿ ಫಲಿತಾಂಶದ ವಿವರ

| ವಿಷಯ | | ಒಟ್ಟು ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ | ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ | ಅನುತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ | ಅತ್ಯುನ್ನತ ಶ್ರೇಣಿ | ಪ್ರಥಮ ದರ್ಜೆ | ದ್ವಿತೀಯ ದರ್ಜೆ | ತೃತೀಯ ದರ್ಜೆ |
|---|---|---|---|---|---|---|---|---|
| ವಿಭಾಗವಾರು ಫಲಿತಾಂಶ | ಕಲಾ | 56 | 56 | 00 | 03 | 36 | 16 | 01 |
| | ವಾಣಿಜ್ಯ | 75 | 75 | 00 | 12 | 61 | 02 | 00 |
| | ಒಟ್ಟು | **131** | **131** | **00** | **15** | **97** | **18** | **01** |

## ದ್ವಿತೀಯ ಪಿಯುಸಿ ಫಲಿತಾಂಶದ ತುಲನಾತ್ಮಕ ಪಟ್ಟಿ

| ಕ್ರ.ಸಂ | ವಿಭಾಗವಾರು | ಮಾರ್ಚ್ 20ರ ಫಲಿತಾಂಶ(ಶೇ) | ಮಾರ್ಚ್ 21ರ ಫಲಿತಾಂಶ(ಶೇ) |
|---|---|---|---|
| 01 | ಕಲಾ ವಿಭಾಗ | 89.06 | 100 |
| 02 | ವಾಣಿಜ್ಯ ವಿಭಾಗ | 100.00 | 100 |
| | ಒಟ್ಟು | **95.07** | **100** |

## ವಿಷಯವಾರು ಫಲಿತಾಂಶ

| ಕ್ರ.ಸಂ. | ಉಪನ್ಯಾಸಕರ ಹೆಸರು | ಬೋಧಿಸುವ ವಿಷಯ | ಒಟ್ಟು ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ | ಉತ್ತೀರ್ಣರಾದ ವಿದ್ಯಾರ್ಥಿಗಳ ಸಂಖ್ಯೆ | ಶೇಕಡವಾರು ಫಲಿತಾಂಶ– **2021** | ಶೇಕಡವಾರು ಫಲಿತಾಂಶ– **2020** |
|---|---|---|---|---|---|---|
| 1 | ಶೇಖರ್ ಜಿ.ಎಂ | ಕನ್ನಡ | 131 | 131 | 100 | 98.60 |
| 2 | ನಾಗರಾಜು | ಇಂಗ್ಲೀಷ್ | 131 | 131 | 100 | 95.07 |
| 3 | ಮಲ್ಲಪ್ಪ | ಇತಿಹಾಸ | 56 | 56 | 100 | 98.46 |
| 4 | ದಯಾನಂದಸ್ವಾಮಿ ಹೆಚ್.ಆರ್ | ಅರ್ಥಶಾಸ್ತ್ರ | 131 | 131 | 100 | 100 |
| 5 | ಕುಮಾರಸ್ವಾಮಿ ಎಂ | ಭೂಗೋಳಶಾಸ್ತ್ರ | 131 | 131 | 100 | 100 |
| 6 | ಸುದರ್ಶನ್ ಜಿ.ವಿ | ರಾಜ್ಯಶಾಸ್ತ್ರ | 56 | 56 | 100 | 98.46 |
| 7 | ಬಸವರಾಜಪ್ಪ ಹೆಚ್.ಪಿ | ಲೆಕ್ಕಶಾಸ್ತ್ರ | 75 | 75 | 100 | 100 |
| 8 | ಹರ್ಷಿತ ಎನ್ | ವ್ಯವಹಾರ ಅಧ್ಯಯನ | 75 | 75 | 100 | 100 |

### 3. ಜೆಎಸ್ಎಸ್ ಪ್ರೌಢಶಾಲೆ, ಗುಂಡ್ಲುಪೇಟೆ

2020-21ನೇ ಶೈಕ್ಷಣಿಕ ಸಾಲಿನ ಎಸ್.ಎಸ್.ಎಲ್.ಸಿ ಪರೀಕ್ಷೆ ಫಲಿತಾಂಶ 100%

## ಫಲಿತಾಂಶ ವಿವರ

| ಪರೀಕ್ಷೆ ತೆಗೆದುಕೊಂಡವರು | ಪರೀಕ್ಷೆಗೆ ಹಾಜರಾದವರು | ಶೇಕಡ ಫಲಿತಾಂಶ |
|---|---|---|
| 50 | 50 | 100 |

## ಶಾಲೆಯ ಫಲಿತಾಂಶ A ಶ್ರೇಣಿ

| ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಅನುತ್ತೀರ್ಣರಾದವರು | A+ | A | B+ | B | C+ | C | (%) 2021 | (%) 2020 |
|---|---|---|---|---|---|---|---|---|---|---|
| 50 | 50 | - | - | - | - | 30 | - | 20 | 100 | 64.5 |

4. ಜೆಎಸ್‌ಎಸ್ ಪ್ರೌಢಶಾಲೆ, ಬರಗಿ

**2020-21ನೇ ಸಾಲಿನಲ್ಲಿ ಶಾಲಾ ಫಲಿತಾಂಶ –100%**

| ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಶೇಕಡ ಫಲಿತಾಂಶ |
|---|---|---|
| 62 | 62 | 100 |

ಶ್ರೇಣಿವಾರು ಫಲಿತಾಂಶ

| A+ | A | B+ | B | C+ | C |
|---|---|---|---|---|---|
| 01 | 02 | - | 34 | - | 25 |

| **2020ರ ಫಲಿತಾಂಶ** | **2021ರ ಫಲಿತಾಂಶ** |
|---|---|
| 75% | 100 |

5. ಜೆಎಸ್‌ಎಸ್ ಪ್ರೌಢಶಾಲೆ, ತೆರಕಣಾಂಬಿ

ಫಲಿತಾಂಶ ವಿವರ

| ವರ್ಷ | ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು | ಉತ್ತೀರ್ಣ | ಅನುತ್ತೀರ್ಣ | ಶೇಕಡ ಫಲಿತಾಂಶ |
|---|---|---|---|---|
| 2019-20 | 25 | 21 | 04 | **81** |
| 2020-21 | 34 | 34 | 00 | **100** |

6. ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆ, ತೆರಕಣಾಂಬಿ

ಸಂಸ್ಕೃತ ಪ್ರಥಮ III ಪ್ರಸಿದ್ಧ ಪರೀಕ್ಷೆ ಫಲಿತಾಂಶದ ವಿವರ:

| ವರ್ಷ | ಪರೀಕ್ಷೆಗೆ ಹಾಜರಾದ ವಿದ್ಯಾರ್ಥಿಗಳು | ಉತ್ತೀರ್ಣ | ಶೇ. ಫಲಿತಾಂಶ |
|---|---|---|---|
| 2019-20 | 25 | 25 | **100** |
| 2020-21 | 32 | 32 | **100** |

7. ಜೆಎಸ್‌ಎಸ್ ಬಾಲಜಗತ್, ಬಾಚಹಳ್ಳಿ

ಪೂರ್ವ ಪ್ರಾಥಮಿಕ ಶಾಲೆಯಾಗಿರುವುದರಿಂದ ಶೇ. 100% ಫಲಿತಾಂಶ ಬಂದಿರುತ್ತದೆ.

8. ಶ್ರೀ ಮದ್ದಾನೇಶ್ವರ (ಜೆಎಸ್‌ಎಸ್) ಪ್ರೌಢಶಾಲೆ, ಪಡಗೂರು

- ವಿದ್ಯಾರ್ಥಿಗಳಿಗೆ ಕಲಿಕೆ ಪ್ರಾರಂಭದಿಂದ ಉತ್ತಮಗೊಳ್ಳಲು 8 & 9ನೇ ತರಗತಿಗಳಿಗೆ ಸೇತುಬಂಧ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.
- ಕಲಿಕಾ ವೃತ್ತದ ಮೂಲಕ ಕಲಿಕೆಗೆ ಒತ್ತು ನೀಡಲಾಗುತ್ತಿದೆ.
- ವಿದ್ಯಾರ್ಥಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಕಲಿಕೆಯಲ್ಲಿ ಆಸಕ್ತಿ ಮೂಡಿಸಲಾಗುತ್ತಿದೆ.
- ಚಟುವಟಿಕೆಗಳ ಮೂಲಕ ಕಲಿಕೆಗೆ ಒತ್ತು ನೀಡಲಾಗುತ್ತಿದೆ.

**ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮ ಪಡಿಸಲು ಯೋಜನೆಗಳು.**

- ಬೆಳಿಗ್ಗೆ ಮತ್ತು ಸಾಯಂಕಾಲ ವಿಶೇಷ ತರಗತಿ ನಡೆಸಲಾಗುತ್ತಿದೆ.
- ಸ್ವ-ಅಧ್ಯಯನ ವೇಳಾಪಟ್ಟಿ ನೀಡಿ ಅನುಪಾಲನೆ ಮಾಡಲಾಗುತ್ತಿದೆ.
- ವೇಕ್‌ಅಫ್ ಕಾಲ್ ಮೂಲಕ ಬೇಗ ಎದ್ದು ಓದಿನ ಬಗ್ಗೆ ಗಮನ ಹರಿಸಲಾಗುತ್ತಿದೆ.
- ಪೋಷಕರ ಸಭೆಗಳನ್ನು ನಡೆಸುವುದು.
- ಉತ್ತೇಜನ ನೀಡುವ ಸಲುವಾಗಿ ಎಸ್‌ಎಸ್‌ಎಲ್‌ಸಿ ವಿಷಯವಾರು ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು & ಅವರ ಪೋಷಕರನ್ನು ಸನ್ಮಾನಿಸಲಾಗುವುದು.
- ಮನೆಮನೆ ಭೇಟಿ ಮಾಡಿ ಓದಿನ ಜಾಗೃತಿ ಮೂಡಿಸಲಾಗುತ್ತಿದೆ.
- ಎ.ಬಿ.ಸಿ ಗುಂಪುಗಳನ್ನಾಗಿ ಮಾಡಿ ವಿಶೇಷ ಗಮನ ಹರಿಸಲಾಗುತ್ತಿದೆ.
- 'ಸಿ' ಗುಂಪಿನ ವಿದ್ಯಾರ್ಥಿಗಳಿಗೆ ಪಾಸಿಂಗ್ ಪ್ಯಾಕೇಜ್ ನೀಡುವುದು.
- ಕಡ್ಡಾಯ ಹಾಜರಾತಿಗೆ ಹೆಚ್ಚು ಗಮನ ಹರಿಸಲಾಗುತ್ತಿದೆ.

**9. ಜೆಎಸ್‌ಎಸ್ ಪ್ರೌಢಶಾಲೆ, ಹೊರೆಯಾಲ**

- 2020-21 ನೇ ಸಾಲಿನ ಎಸ್ ಎಸ್ ಎಲ್ ಸಿ ಯಲ್ಲಿ ಕೋವಿಡ್-19 ರ ಕಾರಣ ಶಿಕ್ಷಣ ಇಲಾಖೆಯ ಆದೇಶದಂತೆ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

| ವರ್ಷ | ಪರೀಕ್ಷೆಗೆ ಕುಳಿತವರು | ಉತ್ತೀರ್ಣರಾದವರು | ಒಟ್ಟು ಶೇ. ಫಲಿತಾಂಶ |
|---|---|---|---|
| 2019-20 | 36 | 29 | 80.55 |
| 2020-21 | 55 | 55 | 100 |

- 2021-22 ನೇ ಸಾಲಿನಲ್ಲಿ ಎಸ್.ಎಸ್.ಎಲ್.ಸಿ.ಯಲ್ಲಿ ಫಲಿತಾಂಶ ಉತ್ತಮಪಡಿಸಲು ಹಲವು ಕ್ರಮಗಳನ್ನು ಕೈಗೊಳ್ಳಲಾಗಿದೆ.
- ಜೆಎಸ್ ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ವಿಷಯ ಪರಿವೀಕ್ಷಕರಾದ ಶ್ರೀ ನಾಗರಾಜ್ ಸರ್ ರವರು ನೀಡಿದ ಸಲಹೆಗಳನ್ನು ಅನುಸರಿಸಲಾಗುತ್ತಿದೆ.
- ಗುಣಮಟ್ಟದ ಕಲಿಕಾವೃತ್ತ –ಬೆಳಗಿನ 9-00 ರಿಂದ 9-45 ರವರೆಗೆ ಕಲಿಕೆಯಲ್ಲಿ ಮುಂದಿರುವಮ ಸರಾಸರಿಯಿರುವ ಹಾಗು ಕಲಿಕೆಯಲ್ಲಿ ಹಿಂದುಳಿದ– 3 ರೀತಿಯ ವಿದ್ಯಾರ್ಥಿಗಳ ಗುಂಪನ್ನು ಮಾಡಿ ಕಲಿಕೆಯಲ್ಲಿ ತೊಡಗಿಸಲಾಗುತ್ತಿದೆ. ಇದರಿಂದ ಕಲಿಕೆಗೆ ಅನುಕೂಲವಾಗುತ್ತಿದೆ.
- ಪ್ರತೀ ವಿಷಯದಲ್ಲೂ ರಸಪ್ರಶ್ನಾ ಕಾರ್ಯಕ್ರಮವನ್ನು ಆಯೋಜಿಸಲಾಗುತ್ತಿದೆ.
- ಸಂಜೆ 4-10 ರಿಂದ 5-00 ರವರೆಗೆ ಗುಂಪು ಕಲಿಕಾ ಚಟುವಟಿಕೆಯನ್ನು ಮಾಡಲಾಗುತ್ತಿದೆ.
- ನಿರಂತರ ಪುನರಾವರ್ತನೆ
- ಕಲಿಕೆಯಲ್ಲಿ ಹಿಂದುಳಿದಿರುವವರು ಕನಿಷ್ಠ ಅಂಕಗಳನ್ನು ಪಡೆಯಲು 'ಪಾಸಿಂಗ್ ಪ್ಯಾಕೇಜ್' ಬಳಕೆ
- ವಿದ್ಯಾರ್ಥಿಗಳ ಮನೆ ಭೇಟಿ

- ಗೈರು ಹಾಜರಾದ ವಿದ್ಯಾರ್ಥಿಗಳಿಗೆ ದೂರವಾಣಿ ಕರೆ ಹಾಗು ಮನೆ ಭೇಟಿ
- ಚಂದನ ಟಿವಿಯಲ್ಲಿ ಬರುವ **'ಸಂವೇದ'** ವೀಡಿಯೋ ಪಾಠಗಳ ವೀಕ್ಷಣೆ ಮಾಡಿ, ಬರೆದಿಡುವಂತೆ ಸೂಚಿಸಲಾಗಿದೆ. ಅದಕ್ಕೆ ಸಂಬಂಧಪಟ್ಟಂತೆ ಮನೆಗೆಲಸವನ್ನು ನೀಡಿ, ಮಾರ್ಗದರ್ಶನ ನೀಡಲಾಗುತ್ತಿದೆ.
- ಶಿಕ್ಷಣ ಇಲಾಖೆ ನೀಡಿರುವ **'ಪರ್ಯಾಯ ಶೈಕ್ಷಣಿಕ ಚಟುವಟಿಕೆಗಳನ್ನು'** 8, 9 & 10 ಈ ಮೂರೂ ತರಗತಿಗಳಿಗೂ ಮಾಡಲಾಗುತ್ತಿದೆ
- ಅಭ್ಯಾಸ ಹಾಳೆಗಳನ್ನು ನೀಡಿ ಮಾರ್ಗದರ್ಶನ ನೀಡಲಾಗುತ್ತಿದೆ. ಹಿಂದುರುಗಿ ಪಡೆಯಲಾಗುತ್ತಿದೆ.

**10. ಜೆಎಸ್‌ಎಸ್ ಪ್ರೌಢಶಾಲೆ, ಕೊಡಸೋಗೆ**

8, 9 ಮತ್ತು 10ನೇ ತರಗತಿಯಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಗಮನ ನೀಡಲಾಗುತ್ತಿದೆ. ಅವರಿಗೆ 4 ರಿಂದ 5 ಗಂಟೆಯವರೆಗೆ ತರಗತಿಯನ್ನು ನಡೆಸಲಾಗುತ್ತಿದೆ. 10ನೇ ತರಗತಿಯಲ್ಲಿ ಯಾರು ಅನುತ್ತೀರ್ಣರಾಗಬಾರದು ಎಂಬ ಹಿನ್ನಲೆಯಲ್ಲಿ ಪರೀಕ್ಷೆಯ ತಯಾರಿಯನ್ನು ಮಾಡಲಾಗುತ್ತಿದೆ. ಮಕ್ಕಳಿಗೆ ಉನ್ನತ ಶ್ರೇಣಿ ಪಡೆಯಲು ಸಿದ್ಧತೆ ಮಾಡಲಾಗಿದೆ. ಒಟ್ಟಾರೆ ಹೆಚ್ಚು ಗುಣಾತ್ಮಕ ಫಲಿತಾಂಶ ನೀಡಲು ಶ್ರಮ ಹಾಕುತ್ತಿದ್ದೇವೆ.

**11. ಜೆಎಸ್‌ಎಸ್ ಪ್ರೌಢಶಾಲೆ, ಶಿವಪುರ**

2020-21ನೇ ಸಾಲಿನಲ್ಲಿ ಶಾಲಾ ಫಲಿತಾಂಶ– 100%

**ಈ ಸಾಲಿನ ಫಲಿತಾಂಶವನ್ನು ಉತ್ತಮ ಪಡಿಸಲು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.**

- ಸಾಮಾನ್ಯ ಶಿಕ್ಷಣ ಇಲಾಖೆ, ಚಾಮರಾಜನಗರ ಇವರು ನೀಡುವ ಆನ್‌ಲೈನ್ ತರಗತಿಗಳ ವೀಕ್ಷಣೆ.
- ಎಲ್ಲಾ ವಿಷಯ ಶಿಕ್ಷಕರು ಆನ್‌ಲೈನ್‌ನಲ್ಲಿ ಕಳುಹಿಸುವ ನೋಟ್ಸ್ ಮತ್ತು ಮಾದರಿ ಪ್ರಶ್ನೆ ಪತ್ರಿಕೆಗಳನ್ನು ವಿದ್ಯಾರ್ಥಿಗಳ ನೋಟ್ಸ್‌ನಲ್ಲಿ ಬರೆಯಿಸಿ ಇದಕ್ಕೆ ಸಂಬಂಧಿಸಿದ ಅನುಮಾನಗಳು, ಹೆಚ್ಚಿನ ಮಾಹಿತಿಗಳನ್ನು ಪರಿಹಾರಗಳನ್ನು ತಿಳಿಸುವಂತೆ ಮಾಡಲಾಗಿದೆ.
- ಗೃಹಪಾಠಗಳ ನಿರ್ವಹಣೆ ಮತ್ತು ಮೇಲ್ವಿಚಾರಣೆ ಮಾಡುವುದು.
- ಪಠ್ಯ ವಿಷಯಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸುವುದು.
- ದಿನಾಂಕ: 23.08.2021 ರಿಂದ ಶಾಲೆಯು ಪ್ರಾರಂಭವಾಗಿದ್ದು, ಶಾಲೆಯಲ್ಲಿ ಸರ್ಕಾರದ ಆದೇಶದಂತೆ ಕೋವಿಡ್-19 ನಿಯಮಗಳ (SOP) ಪಾಲನೆಯೊಂದಿಗೆ ತರಗತಿಗಳನ್ನು ನಡೆಸಲಾಗುತ್ತಿದೆ.
- ಶಾಲೆಯು ಮಕ್ಕಳ ಸುರಕ್ಷತೆಯ ಕೇಂದ್ರವಾಗಿರುವಂತೆ ನೋಡಿಕೊಳ್ಳುವುದು.
- ಮಕ್ಕಳ ಆರೋಗ್ಯದ ಬಗ್ಗೆ ಶಿಕ್ಷಕರು ಗಮನ ಹರಿಸುವುದು.
- ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗುವಂತೆ ಮೇಲ್ವಿಚಾರಣೆ ಮಾಡುವುದು.
- ಶಾಲೆಗೆ ಗೈರುಹಾಜರಾದ ವಿದ್ಯಾರ್ಥಿಗಳ ಮನೆ-ಮನೆ ಭೇಟಿ ಮಾಡಿ ಪೋಷಕರಿಂದ ಮಾಹಿತಿ ಪಡೆಯಲಾಗಿದೆ.
- ಪರೀಕ್ಷೆಗೆ ಎಲ್ಲಾ ವಿದ್ಯಾರ್ಥಿಗಳು ಕಡ್ಡಾಯವಾಗಿ ಹಾಜರಾಗುವಂತೆ ತಿಳಿಸಲಾಗಿದೆ.
- ರೂಪಣಾತ್ಮಕ ಪರೀಕ್ಷೆಯನ್ನು ನಡೆಸಲಾಗಿದೆ.
- ಪೋಷಕರ ಸಭೆಯನ್ನು ಕರೆದು ಮಕ್ಕಳ ಪ್ರಗತಿ ಬಗ್ಗೆ ಚರ್ಚಿಸಿ, ಮಕ್ಕಳ ಕಲಿಕೆಗೆ ಪೂರಕವಾದ ವಾತವರಣ ಕಲ್ಪಿಸುವಂತೆ ಮನವರಿಕೆ ಮಾಡುವುದು.

## 26.6 (25.6) ಪ್ರಗತಿ ಪರಿಶೀಲನೆ

### A. ಅಧ್ಯಾಪಕರುಗಳ ಸಾಧನೆಗಳು

**ಹಿಂದಿನ ಸಭೆಯ ತೀರ್ಮಾನ:** ಶಾಲೆ/ಕಾಲೇಜುಗಳ ಉಪನ್ಯಾಸಕರು/ಶಿಕ್ಷಕರುಗಳು ವಿಚಾರ ಸಂಕಿರಣ/ಕಾರ್ಯಾಗಾರ/ಸಮ್ಮೇಳನ/ ವೆಬಿನಾರ್‌ಗಳು ಹಾಗೂ ತರಬೇತಿ ಕಾರ್ಯಕ್ರಮಗಳಲ್ಲಿ ಅಧ್ಯಾಪಕರುಗಳು ಭಾಗವಹಿಸಿ ತಮ್ಮ ಜ್ಞಾನವನ್ನು ಅಭಿವೃದ್ಧಿಪಡಿಸಿಕೊಳ್ಳಲು ಸಭೆ ತೀರ್ಮಾನಿಸಿತು.

**ಕೈಗೊಂಡಿರುವ ಕ್ರಮಗಳು**

1. **ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ**

   - ಶ್ರೀ ಬಿ. ಪ್ರಭುಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗ ಇವರು **"Self-Suffeciency in Agricultural and Industrial Production in Indian Economy-A Study"** ವಿಷಯ ಕುರಿತ ಲೇಖನವು International Journal of Recent Advances in Multidisciplinary Topics - Volume 2 (ISSN (Online)-2582-7839) ಆಗಸ್ಟ್–2021 ರಲ್ಲಿ ಪ್ರಕಟಣೆಗೊಂಡಿರುತ್ತದೆ.
   - ಶ್ರೀ ಎನ್. ಮಲ್ಲುಸ್ವಾಮಿ, ದೈಹಿಕ ಶಿಕ್ಷಣ ನಿರ್ದೇಶಕರು ಇವರು **"Role of Psychological Factors in the Achivement of A Champion"** ವಿಷಯ ಕುರಿತ ಲೇಖನವು Multidisciplinary National Conference (ISBN: 978-81-945326-0-6) ರಲ್ಲಿ ಪ್ರಕಟಣೆಗೊಂಡಿರುತ್ತದೆ.
   - ದಿನಾಂಕ: 28.09.2021 ರಿಂದ 11.10.2021 ರವರೆಗೆ Academic Staff College (Human Resource Development Center), Mysore University ಇವರು ಆಯೋಜಿಸಿದ್ದ **"Refresher Course in Commerce"** (Online) ನಲ್ಲಿ ಶ್ರೀ ಟಿ.ಎಂ. ಮರಿಸ್ವಾಮಿ, ಸಹಾಯಕ ಪ್ರಾಧ್ಯಾಪಕರು, ವಾಣಿಜ್ಯಶಾಸ್ತ್ರ ವಿಭಾಗ ಇವರು ಭಾಗವಹಿಸಿದ್ದರು.
   - ಶ್ರೀಮತಿ ಜಯಶೀಲಾ ಎಂ.ಎನ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಇವರು **"ಮೈಸೂರಿನ ಮೇದರ ಸಂಪ್ರದಾಯಗಳು ಮತ್ತು ನಂಬಿಕೆಗಳು"** ವಿಷಯ ಕುರಿತ ಲೇಖನವು **"ಸಾಹಿತ್ಯ ಚೇತನ–ಕನ್ನಡ ಸಾಹಿತ್ಯ ವಿಮರ್ಶೆಯ ತಾತ್ವಿಕ ಒಳ ನೋಟಗಳು"** ಪುಸ್ತಕದಲ್ಲಿ ಬೇರುನಾರು ಸಾಮಾಜಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ, ಪಾವಗಡ, ತುಮಕೂರು (ISBN: 819446721-7) ರಲ್ಲಿ ಪ್ರಕಟಣೆಗೊಂಡಿರುತ್ತದೆ.
   - ಶ್ರೀಮತಿ ಜಯಶೀಲಾ ಎಂ.ಎನ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಇವರು ಡಾ. ವಿಜಯ ಅವರ **"ಬಂದರೋ ಬಂದರು ಮುಗ್ಧ ಜನರ ಶೋಷಣೆಗೆ ಹಿಡಿದ ಕೈಗನ್ನಡಿ"** ವಿಷಯ ಕುರಿತ ಲೇಖನವು **International Journal of Kannada Research, New Delhi** (ISSN: 2454-5813-Impact Factor: RJIF 4.89) ರಲ್ಲಿ ಪ್ರಕಟಣೆಗೊಂಡಿರುತ್ತದೆ.
   - ಶ್ರೀಮತಿ ಜಯಶೀಲಾ ಎಂ.ಎನ್, ಸಹಾಯಕ ಪ್ರಾಧ್ಯಾಪಕರು, ಕನ್ನಡ ವಿಭಾಗ ಇವರು ಕುವೆಂಪು **"ಬೆರಳ್‌ಗೆ ಕೊರಳ್ ನಾಟಕದಲ್ಲಿನ ಗುರುತತ್ವ ಒಂದು ವಿವೇಚನೆ"** ವಿಷಯ ಕುರಿತ ಲೇಖನವು **International Journal of Kannada Research, New Delhi** (ISSN: 2454-5813-Impact Factor: RJIF 4.89) ರಲ್ಲಿ ಪ್ರಕಟಣೆಗೊಂಡಿರುತ್ತದೆ.

## ವಿಭಾಗಗಳ ವೆಬಿನಾರ್ ಕಾರ್ಯಕ್ರಮ ಆಯೋಜನೆ ವಿವರ

- ದಿನಾಂಕ: 07.08.2021 ರಂದು Competitive Examination Training Cell, Career Guidance and Counseling Cell ವತಿಯಿಂದ ಆನ್‌ಲೈನ್ ಮೂಲಕ **"Prepareation for KPSC and UPSC Examinations"** ವಿಷಯ ಕುರಿತು ವಿದ್ಯಾರ್ಥಿಗಳಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಶ್ರೀ ಸಚಿನ್‌ರಾಜ್, ತರಬೇತುದಾರರು, ಸ್ಪರ್ಧಾತ್ಮಕ ಪರೀಕ್ಷೆಗಳು, ಮಂಡ್ಯ ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಕಾರ್ಯಕ್ರಮ ನಡೆಸಿಕೊಟ್ಟರು. ಡಾ. ಎನ್. ಮಹದೇವಸ್ವಾಮಿ ಪ್ರಾಂಶುಪಾಲರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಸಿ.ಎಂ. ಮಣಿಕಂಠ, ಸಂಚಾಲಕರು, Competitive Examination Training Cell ಇವರು ಉಪಸ್ಥಿತರಿದ್ದರು. 74 ವಿದ್ಯಾರ್ಥಿಗಳು ಭಾಗವಹಿಸಿದ್ದರು.
- ದಿನಾಂಕ: 10.08.2021 ರಂದು ಇತಿಹಾಸ ವಿಭಾಗ ಮತ್ತು Internal Quality Assurance Cell ಹಾಗೂ ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ ಇವರ ಸಹಯೋಗದದೊಂದಿಗೆ Webinar on Lecture Series on **"Quit India Movement-79"** ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಡಾ. ಎನ್. ಮಹದೇವಸ್ವಾಮಿ, ಪ್ರಾಂಶುಪಾಲರು **"Quit Inida Movement in India"** ವಿಷಯದ ಬಗ್ಗೆ ಉಪನ್ಯಾಸ ನೀಡಿದರು. ಡಾ. ರವಿಕುಮಾರ್, ಸಹಾಯಕ ಪ್ರಾಧ್ಯಾಪಕರು, ಇತಿಹಾಸ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು **"Quit Inida Movement in Karnataka"** ವಿಷಯ ಕುರಿತು ಉಪನ್ಯಾಸ ನೀಡಿದರು. ಶ್ರೀ ಕೆ.ಎಸ್. ಮರಿಸ್ವಾಮಿ, ಪ್ರಾಂಶುಪಾಲರು, ಜೆಎಸ್‌ಎಸ್ ಮಹಿಳಾ ಕಾಲೇಜು, ಚಾಮರಾಜನಗರ ಇವರು ಅಧ್ಯಕ್ಷತೆ ವಹಿಸಿದ್ದರು.
- ದಿನಾಂಕ: 12.08.2021 ರಂದು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ವತಿಯಿಂದ **'ರಾಷ್ಟ್ರೀಯ ಗ್ರಂಥಪಾಲಕರ ದಿನಾಚರಣೆ'** ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಶ್ರೀ ಶ್ರೀನಿವಾಸ್ ನಾಯಕ್, ಗ್ರಂಥಪಾಲಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಗುಂಡ್ಲುಪೇಟೆ ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡುತ್ತಾ ಡಾ. ಎಸ್.ಆರ್. ರಂಗನಾಥನ್ ಒಬ್ಬ ಗಣಿತಶಾಸ್ತ್ರಜ್ಞರಾಗಿದ್ದರೂ ಸಹ ಗ್ರಂಥಾಲಯ ಪಿತಾಮಹರಾಗಿ ನೀಡಿದ ಕೊಡುಗೆಗಳನ್ನು ಸ್ಮರಿಸಿದರು. ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ. ಎನ್. ಮಹದೇವಸ್ವಾಮಿರವರು ವಹಿಸಿದ್ದರು. ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಹೆಚ್.ಪಿ. ಬಸವರಾಜಪ್ಪ ಅತಿಥಿಗಳಾಗಿ ಆಗಮಿಸಿದ್ದರು. IQAC ಸಂಚಾಲಕರಾದ ಶ್ರೀ ಮರಿಸ್ವಾಮಪ್ಪ ಹಾಗೂ ಶ್ರೀ ಡಿ. ಬಿ. ಗಿರೀಶ್ ಕುಮಾರ್, ಗ್ರಂಥಪಾಲರು ಉಪಸ್ಥಿತರಿದ್ದರು. ಅಧ್ಯಾಪಕ ಹಾಗೂ ಅಧ್ಯಾಪಕೇತರರು ಭಾಗವಹಿಸಿದ್ದರು.
- ದಿನಾಂಕ: 17.08.2021 ರಂದು Competitive Examination Training Cell, Career Guidance and Counseling Cell ವತಿಯಿಂದ ಆನ್‌ಲೈನ್ ಮೂಲಕ **"How to Prepare for Competitive Examination"** ವಿಷಯ ಕುರಿತು ವಿದ್ಯಾರ್ಥಿಗಳಿಗೆ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಡಾ. ರವಿ, ತರಬೇತುದಾರರು, ಸ್ಪರ್ಧಾತ್ಮಕ ಪರೀಕ್ಷೆಗಳು, ನವೋದಯ ಫೌಂಡೇಷನ್, ಮೈಸೂರು ಇವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ಕಾರ್ಯಕ್ರಮ ನಡೆಸಿಕೊಟ್ಟರು. ಡಾ. ಎನ್. ಮಹದೇವಸ್ವಾಮಿ ಪ್ರಾಂಶುಪಾಲರು ಅಧ್ಯಕ್ಷತೆ ವಹಿಸಿದ್ದರು. ಸಂಚಾಲಕರಾದ ಶ್ರೀ ಸಿ.ಎಂ. ಮಣಿಕಂಠ ಉಪಸ್ಥಿತರಿದ್ದರು.

- ದಿನಾಂಕ: 23.08.2021 ರಂದು ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ ಮತ್ತು ಸಂಕಲ್ಪ ಶಿಕ್ಷಕರ ವೇದಿಕೆ, ಗುಂಡ್ಲುಪೇಟೆ ಹಾಗೂ ಕಾಲೇಜಿನ ಐಕ್ಯೂಎಸಿ ಸಹಯೋಗದಲ್ಲಿ **'ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೋಶದ ಉದ್ಘಾಟನೆ'** ಹಾಗೂ **'ಸಂಕಲ್ಪ ಯಶಸ್ಸಿನೆಡೆಗೆ ಮೊದಲ ಹೆಜ್ಜೆ'** ಕೃತಿ ಬಿಡುಗಡೆ ಸಮಾರಂಭವನ್ನು ಆಯೋಜಿಸಲಾಗಿತ್ತು. ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ಶ್ರೀ.ಮ.ನಿ.ಪ್ರ.ಸ್ವ ಶ್ರೀ ಶಿವಲಿಂಗೇಂದ್ರ ಸ್ವಾಮಿಗಳು, ಅಡವಿ ಮಠ, ಪಡಗೂರು ರವರು ವಹಿಸಿ **'ಸಂಕಲ್ಪ ಯಶಸ್ಸಿನೆಡೆಗೆ ಮೊದಲ ಹೆಜ್ಜೆ'** ಕೃತಿಯನ್ನು ಲೋಕಾರ್ಪಣೆ ಮಾಡಿದರು. ಶ್ರೀ ಪುರುಷೋತ್ತಮ್ (ನಿವೃತ್ತ), ಸೀನಿಯರ್ ಮ್ಯಾನೇಜರ್, ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಜಿ.ಮಲ್ಲೇಶ್, ಪ್ರಾಂಶುಪಾಲರು, ಸರ್ಕಾರಿ ಪ್ರಥಮದರ್ಜೆ ಕಾಲೇಜು, ಗುಂಡ್ಲುಪೇಟೆ, ಶ್ರೀ ಹೆಚ್.ಪಿ. ಬಸವರಾಜಪ್ಪ, ಪ್ರಾಂಶುಪಾಲರು, ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಗುಂಡ್ಲುಪೆ ಇವರುಗಳು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಂಶುಪಾಲರಾದ ಡಾ. ಎನ್. ಮಹದೇವಸ್ವಾಮಿ ವಹಿಸಿದ್ದರು. ಸ್ಪರ್ಧಾತ್ಮಕ ಪರೀಕ್ಷೆಗಳ ತರಬೇತಿ ಕೋಶ ಸಂಚಾಲಕರಾದ ಶ್ರೀ ಮಣಿಕಂಠ ಸಿ.ಎಂ, ಹಾಗೂ ಸಂಕಲ್ಪ ಶಿಕ್ಷಕರ ವೇದಿಕೆ ಪದಾಧಿಕಾರಿಗಳು, ಕಾಲೇಜಿನ ಅಧ್ಯಾಪಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ವಿಚಾರ ಸಂಕಿರಣ/ಕಾರ್ಯಾಗಾರ/ಸಮ್ಮೇಳನ/ವೆಬಿನಾರ್‌ಗಳಲ್ಲಿ ಅಧ್ಯಾಪಕರುಗಳು ಭಾಗವಹಿಸಿರುವ ಮಾಹಿತಿ

| Sl. No. | Name and Designation | Title of Seminar/Workshop/ Conference/Webinar | State/ National/ International | Date | Place |
|---|---|---|---|---|---|
| 1 | **C Mahadevaprasad**<br>Asst. Prof. of Commerce | **"NEP-2020 – An Analytical Perspective"** | State Level | 06.09.2021 | GFGC, Talakadu |
| 2 | **D.B. Girishkumar**<br>Librarian | **"NEP-2020 LIS Curriculam"** | State Level | 19.09.2021 | Librarian Association, Karnataka |
| 3 | **M Mahadevaswamy**<br>Asst. Prof. of English | One Day Webinar on **"Introduction to Literacy Theory"** | State Level | 20.09.2021 | JSS College, B.N. Road Mysore |
| 4 | **Dr. N. Mahadevaswamy**<br>Principal | **"Multidisciplinary Research and Innovation in the field of Engineering, Commerce, Management, Humanities and Science"** | International Conference | 10.10.2021 to 11.10.2021 | Research Foundation of India and JHERF |
| 5 | **D.B. Girishkumar**<br>Librarian | **"Librarian : Excel beyond Librarianship towards quality and Excellence"** | State Level | 17.10.2021 | Librarian Association, Karnataka |
| 6 | **N Malluswamy**<br>Physical Education Teacher | ಒಂದು ದಿನದ ಕಾರ್ಯಾಗಾರ **"ರಾಷ್ಟ್ರೀಯ ಶಿಕ್ಷಣ ನೀತಿಯಡಿಯಲ್ಲಿ ದೈಹಿಕ ಶಿಕ್ಷಣ ಪಾಠಪ್ರವಚನಗಳನ್ನು ಪರಿಚಯಿಸಿ ಸಮರ್ಪಕವಾಗಿ ಅನುಷ್ಠಾನಗೊಳಿಸುವ ಬಗ್ಗೆ"** | ವಿಶ್ವವಿದ್ಯಾನಿಲಯ ಮಟ್ಟ | 28.10.2021 | ದೈಹಿಕ ಶಿಕ್ಷಣ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು |

2. ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಗುಂಡ್ಲುಪೇಟೆ

- 2020-21ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಪಿಯುಸಿಗೆ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಕೋವಿಡ್-19ರ ಹಿನ್ನೆಲೆಯಲ್ಲಿ ಭೌತಿಕ ತರಗತಿಗಳು ಪ್ರಾರಂಭಗೊಳ್ಳದ ಸಂಬಂಧ ಉಪನ್ಯಾಸಕರು ವಿಷಯವಾರು ಆನ್‌ಲೈನ್ ತರಗತಿ ನಡೆಸಿರುತ್ತಾರೆ.
- ಭೂಗೋಳಶಾಸ್ತ್ರ ಉಪನ್ಯಾಸಕರಾದ ಶ್ರೀ ಎಂ ಕುಮಾರಸ್ವಾಮಿರವರು ಚಾಮರಾಜನಗರ ಜಿಲ್ಲಾ ವಿಭಾಗದಿಂದ ದ್ವಿತೀಯ ಪಿಯುಸಿ ಭೂಗೋಳಶಾಸ್ತ್ರ ರಾಜ್ಯ ಮಟ್ಟದ ಯುಟ್ಯೂಬ್ ತರಗತಿಗಳನ್ನು ನಡೆಸಿರುತ್ತಾರೆ.
- 2020-21ನೇ ಸಾಲಿನ ಪ್ರವೇಶ ಪಡೆದ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ ಕೋವಿಡ್-19ರ ಹಿನ್ನೆಲೆಯಲ್ಲಿ ರದ್ದಾದ ಕಾರಣ ಇಲಾಖೆಯ ಆದೇಶದಂತೆ ಆನ್‌ಲೈನ್ ಮೂಲಕ ವಿಷಯವಾರು ಪರೀಕ್ಷೆಗೆ ಪ್ರಶ್ನೆ ಪತ್ರಿಕೆ ನೀಡಿ ಉತ್ತರಿಸಿದ ಉತ್ತರಪತ್ರಿಕೆಗಳನ್ನು ಮೌಲ್ಯಮಾಪನ ಮಾಡಿ ಫಲಿತಾಂಶವನ್ನು ಉಪನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಚಾಮರಾಜನಗರ ರವರಿಂದ ಫಲಿತಾಂಶವನ್ನು ಅನುಮೋದನೆ ಪಡೆಯಲಾಗಿದೆ.
- 2020-21ನೇ ಸಾಲಿನ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ವಾರ್ಷಿಕ ಪರೀಕ್ಷೆ ಕೋವಿಡ್-19ರ ಕಾರಣ ರದ್ದಾಗಿದ್ದು, ವಿದ್ಯಾರ್ಥಿಗಳ ದ್ವಿತೀಯ ಪಿಯುಸಿ ಫಲಿತಾಂಶಕ್ಕೆ ಸಂಬಂಧಸಿದ ಎಲ್ಲ ಮಾಹಿತಿಯನ್ನು ಇಲಾಖೆಯ ಆದೇಶದಂತೆ ನಿರ್ವಹಿಸಲಾಗಿದೆ.

3. ಶ್ರೀ ಮದ್ದಾನೇಶ್ವರ (ಜೆಎಸ್‌ಎಸ್) ಪ್ರೌಢಶಾಲೆ, ಪಡಗೂರು

- ದಿನಾಂಕ: 02.08.2021 & 03.08.2021 ರಂದು ಬೆಂಗಳೂರಿನಲ್ಲಿ ನಡೆದ 28 ನೇ ಕರ್ನಾಟಕ ರಾಜ್ಯ ಮಕ್ಕಳ ವಿಜ್ಞಾನ ಸಮಾವೇಶದಲ್ಲಿ ಮುಖ್ಯ ಶಿಕ್ಷಕರಾದ ಶ್ರೀ ಭವಾನಿಶಂಕರ್. ಎಂ ಚಾಮರಾಜನಗರ ಜಿಲ್ಲೆಯಿಂದ ಭಾಗವಹಿಸಿದ್ದರು.
- ದಿನಾಂಕ: 12.09.2021 ರಿಂದ 21.09.2021ರ ವರೆಗೆ ಚಿತ್ರದುರ್ಗದ ಚಳ್ಳಕೆರೆಯ ಕುದಾಪುರದಲ್ಲಿ ನಡೆದ (ಭಾರತೀಯ ವಿಜ್ಞಾನ ಸಂಸ್ಥೆವತಿಯಿಂದ) ವಿಜ್ಞಾನ ಶಿಕ್ಷಕರ ಕಾರ್ಯಗಾರದಲ್ಲಿ ಭಾಗವಹಿಸಿದ್ದರು.

4. ಜೆಎಸ್‌ಎಸ್ ಪ್ರೌಢಶಾಲೆ, ಕೊಡಸೋಗೆ

- ದಿನಾಂಕ: 12.09.2021 ರಿಂದ 21.09.2021ರ ವರೆಗೆ ಚಿತ್ರದುರ್ಗದ ಚಳ್ಳಕೆರೆಯ ಕುದಾಪುರದಲ್ಲಿ ನಡೆದ (ಭಾರತೀಯ ವಿಜ್ಞಾನ ಸಂಸ್ಥೆವತಿಯಿಂದ) ಶ್ರೀ ಡಿ. ನವೀನ್, ಶಿಕ್ಷಕರು ಇವರು ವಿಜ್ಞಾನ ಶಿಕ್ಷಕರ ಕಾರ್ಯಗಾರದಲ್ಲಿ ಭಾಗವಹಿಸಿದ್ದರು.

**B. ವಿದ್ಯಾರ್ಥಿಗಳ ಸಾಧನೆಗಳು**

1. ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ

- ದಿನಾಂಕ: 12.10.2021 ರಂದು ಜಿಲ್ಲಾ ಏಡ್ಸ್ ಪ್ರತಿಬಂಧಕ ಮತ್ತು ನಿಯಂತ್ರಣ ಘಟಕ, ಚಾಮರಾಜನಗರ ಜಿಲ್ಲೆ ಇವರು ಆಯೋಜಿಸಿದ್ದ ರಸಪ್ರಶ್ನೆ ಸ್ಪರ್ಧೆಗೆ ನಮ್ಮ ಕಾಲೇಜಿನಿಂದ ಕು. ಚಂದನ ಎಸ್.ಎಸ್, ತೃತೀಯ ಬಿ.ಎ (ಹೆಚ್.ಇ.ಪಿ), ಕು. ಕೋಮಲ, ತೃತೀಯ ಬಿ.ಎ (ಹೆಚ್.ಇ.ಜಿ) ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

2. ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಗುಂಡ್ಲುಪೇಟೆ

- ದಿನಾಂಕ: 30.09.2021 ರಂದು 2021-22ನೇ ಸಾಲಿನ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರಿಗೆ ಪ್ರತಿಭಾ ದಿನಾಚರಣೆಯ ಅಂಗವಾಗಿ ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು.

3. ಶ್ರೀ ಮದ್ದಾನೇಶ್ವರ (ಜೆಎಸ್ಎಸ್) ಪ್ರೌಢಶಾಲೆ, ಪಡಗೂರು

- ರಾಷ್ಟ್ರಗಾನ ಆನ್‌ಲೈನ್ ಸ್ಪರ್ಧೆಯಲ್ಲಿ ನಮ್ಮ ಶಾಲೆಯ 45 ವಿದ್ಯಾರ್ಥಿಗಳು ಭಾಗವಹಿಸಿ ಪ್ರಶಸ್ತಿ ಪತ್ರ ಪಡೆದಿರುತ್ತಾರೆ.
- ದಿನಾಂಕ: 15.08.2021 ರ ಸ್ಕೌಟ್ಸ್‌ನಲ್ಲಿ ರಾಜ್ಯ ಪುರಸ್ಕಾರ ಪಡೆದ ನಮ್ಮ ಶಾಲೆಯ ಹಿರಿಯ ವಿದ್ಯಾರ್ಥಿಯಾದ ಜಿ.ವೀರಭದ್ರಸ್ವಾಮಿರವರನ್ನು ಆಹ್ವಾನಿಸಿ ಶಾಲಾ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗುವ ಉದ್ದೇಶದಿಂದ ಗ್ರಾಮದ ಮುಖಂಡರ ಸಮ್ಮುಖದಲ್ಲಿ ಸನ್ಮಾನಿಸಲಾಯಿತು.
- ದಿನಾಂಕ: 01.10.2021 ರಂದು ಜಲ ಜೀವನ್ ಮಿಷನ್ ಯೋಜನೆ ಚಾಮರಾಜನಗರ ಇವರು ಏರ್ಪಡಿಸಿದ್ದ ಪ್ರಬಂಧ, ಚರ್ಚಾಸ್ಪರ್ಧೆ ಮತ್ತು ಚಿತ್ರಕಲಾ ಸ್ಪರ್ಧೆಗಳಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿ ಬಹುಮಾನ ಪಡೆದಿರುತ್ತಾರೆ.

4. ಜೆಎಸ್ಎಸ್ ಪ್ರೌಢಶಾಲೆ, ಹೊರೆಯಾಲ

- ಜಲ ಜೀವನ್ ಮಿಷನ್ ರವರು ನಡೆಸಿದ ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ, ಚಿತ್ರಕಲಾ ಸ್ಪರ್ಧೆಯಲ್ಲಿ ನಮ್ಮ ಶಾಲಾ ಮಕ್ಕಳು ಭಾಗವಹಿಸಿ ಬಹುಮಾನಗಳನ್ನು ಪಡೆದಿದ್ದಾರೆ.

5. ಜೆಎಸ್ಎಸ್ ಪ್ರೌಢಶಾಲೆ, ಕೊಡಸೋಗೆ

- ನಮ್ಮ ಶಾಲೆಯಲ್ಲಿ ಜಲಜೀವನ್ ಮಿಷನ್‌ಜಿಲ್ಲಾ ಪಂಚಾಯಿತಿ ಚಾಮರಾಜನಗರ ಮತ್ತು ಈಕೋ ಕ್ಲಬ್ ವತಿಯಿಂದ ನೀರಿನ ಸಂರಕ್ಷಣೆಯ ಬಗ್ಗೆ ತಿಳುವಳಿಕೆ ನೀಡಿ ಸಹ ಪಠ್ಯ ಚಟುವಟಿಕೆಗಳನ್ನು ನಡೆಸಿ ಬಹುಮಾನವನ್ನು ನೀಡಿದರು.

## 26.7 (25.7) ಮೂಲಭೂತ ಸೌಕರ್ಯಗಳು

**ಹಿಂದಿನ ಸಭೆಯ ತೀರ್ಮಾನ:** ಎಲ್ಲಾ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರುಗಳು ಸಣ್ಣಪುಟ್ಟ ದುರಸ್ಥಿ ಕೆಲಸಗಳನ್ನು ಆಡಳಿತ ಮಂಡಳಿಯಿಂದ ಅನುಮತಿ ಪಡೆದು ಮಾಡಿಸಿಕೊಳ್ಳಬಹುದೆಂದು ಹಾಗೂ ದೊಡ್ಡ ಕಾಮಗಾರಿ ಕೆಲಸಗಳು, ನೌಕರರ ನೇಮಕಾತಿ, ಹೊಸ ಸಂಯೋಜನೆ ಪ್ರಾರಂಭಿಸಲು, ಕಟ್ಟಡ ದುರಸ್ಥಿ, ಕಟ್ಟಡಕ್ಕೆ ಬಣ್ಣ, ಕಂಪ್ಯೂಟರ್, ಯುಪಿಎಸ್‌ಗಳ ಖರೀದಿ ಮತ್ತು ದುರಸ್ಥಿ ಇತ್ಯಾದಿ ಕೆಲಸಗಳಿಗೆ ಶಾಲಾ/ಕಾಲೇಜು ಮುಖ್ಯಸ್ಥರುಗಳು ವಿವರವಾಗಿ ಆಡಳಿತ ಮಂಡಳಿಗೆ ಪತ್ರ ಬರೆದು ಅನುಮತಿ ಪಡೆಯಬೇಕೆಂದು ಸಭೆಯಲ್ಲಿ ತೀರ್ಮಾನಿಸಲಾಯಿತು.

**ಕೈಗೊಂಡಿರುವ ಕ್ರಮಗಳು**

1. ಜೆಎಸ್ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ

- 2014 ರಲ್ಲಿ ಖರೀದಿಸಿ ಯುಪಿಎಸ್‌ಗೆ ಅಳವಡಿಸಿದ್ದ 26 ಬ್ಯಾಟರಿಗಳನ್ನು Buyback ಯೋಜನೆ ಅಡಿಯಲ್ಲಿ ವಿಲೇವಾರಿ ಮಾಡಿ ಹೊಸದಾಗಿ 10 ಬ್ಯಾಟರಿಗಳನ್ನು Unique Technology, Mysore ಇವರಿಂದ ಖರೀದಿಸಿ ಅಳವಡಿಸಿಕೊಂಡು ಬಳಸಲಾಗುತ್ತಿದೆ.

2. ಜೆಎಸ್ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಗುಂಡ್ಲುಪೇಟೆ

- 2020-21ನೇ ಶೈಕ್ಷಣಿಕ ಸಾಲಿಗೆ ವಾಣಿಜ್ಯ ವಿಭಾಗದಲ್ಲಿ ಹೊಸ ಸಂಯೋಜನೆಯನ್ನು (**EBACs**) ಪ್ರಾರಂಭಿಸುವ ಸಂಬಂಧ ಪ್ರಸ್ತಾವನೆಯನ್ನು ಪದವಿಪೂರ್ವ ಶಿಕ್ಷಣ ಇಲಾಖೆಗೆ ಮಾರ್ಚ್-2020ರಲ್ಲಿ ಸಲ್ಲಿಸಲಾಗಿದ್ದು, ಈ ಶೈಕ್ಷಣಿಕ ಸಾಲಿನಲ್ಲಿ ಮಂಜೂರಾತಿ ದೊರಕಿರುವುದಿಲ್ಲ.

➢ ನಮ್ಮ ಪದವಿಪೂರ್ವ ವಿಭಾಗಕ್ಕೆ ನಾಲ್ಕು ತರಗತಿ ಕೊಠಡಿಗಳು, ಒಂದು ಉಪನ್ಯಾಸಕರ ಕೊಠಡಿ, ಒಂದು ಕಛೇರಿ ಮತ್ತು ಪ್ರಾಂಶುಪಾಲರ ಕೊಠಡಿ ಒಟ್ಟು 06 ಕೊಠಡಿಗಳು ಮಾತ್ರ ಲಭ್ಯವಿದ್ದು, ವಿದ್ಯಾರ್ಥಿನಿಯರಿಗೆ ವಿಶ್ರಾಂತಿ ಕೊಠಡಿ ಮತ್ತು **Store-Room** ಅವಶ್ಯಕತೆಯಿದ್ದು ಒದಗಿಸಿಕೊಡಬೇಕೆಂದು ಮತ್ತೊಮ್ಮೆ ಕೋರುತ್ತೇವೆ.

3. **ಶ್ರೀ ಮದ್ದಾನೇಶ್ವರ (ಜೆಎಸ್ಎಸ್) ಪ್ರೌಢಶಾಲೆ, ಪಡಗೂರು**

➢ ವಿದ್ಯುತ್ ಅಸಮರ್ಪಕ (ಮೊದಲ ಮಹಡಿ) ಬಗ್ಗೆ ಪತ್ರ ಬರೆದು ಅನುಮೋದನೆಗೊಂಡು ಬಂದಿದ್ದು, ಇಂಜಿನಿಯರ್‌ರವರು ಭೇಟಿ ನೀಡಿ ಹೋಗಿರುತ್ತಾರೆ. ಕೆಲಸ ಪ್ರಾರಂಭವಾಗಬೇಕಿದೆ.

**26.8** ಇತರೆ ವರದಿಗಳು

1. **ಜೆಎಸ್ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜು, ಗುಂಡ್ಲುಪೇಟೆ**

➢ ದಿನಾಂಕ: 06.08.2021 ರಂದು ಇತಿಹಾಸ ವಿಭಾಗದ ವತಿಯಿಂದ **'ಹಿರೋಷಿಮಾ ದಿನಾಚರಣೆ'**ಯನ್ನು ಆಚರಿಸಲಾಯಿತು.

➢ ದಿನಾಂಕ: 15.08.2021 ರಂದು **'75 ನೇ ಸ್ವಾತಂತ್ರ್ಯ ದಿನಾಚರಣೆ'**ಯನ್ನು ಆಚರಿಸಲಾಯಿತು. ಸದರಿ ದಿನದಂದು ಕಾಲೇಜಿನ ಆವರಣದಲ್ಲಿ ಗಿಡಗಳನ್ನು ನಡೆಲಾಯಿತು.

➢ ದಿನಾಂಕ: 31.08.2021 ರಂದು 2020-21ನೇ ಶೈಕ್ಷಣಿಕ ಸಾಲಿನ ಅಂತಿಮ ಬಿ.ಎ ವಿದ್ಯಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು.

➢ ದಿನಾಂಕ: 02.10.2021 ರಂದು **'ಮಹಾತ್ಮ ಗಾಂಧೀಜಿ'** ಮತ್ತು **'ಲಾಲ್ ಬಹದ್ದೂರ್ ಶಾಸ್ತ್ರಿ'**ರವರ ಜಯಂತಿಯನ್ನು ಆಚರಿಸಲಾಯಿತು.

➢ ದಿನಾಂಕ: 26.10.2021 ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಚಾಮರಾಜನಗರದಿಂದ ಗಾಯಕರು ಕಾಲೇಜಿಗೆ ಆಗಮಿಸಿ ಕನ್ನಡಕ್ಕಾಗಿ ಅಭಿಯಾನ ಅಂಗವಾಗಿ ಡಾ. ಕುವೆಂಪು ಅವರ **"ಬಾರಿಸು ಕನ್ನಡ ಡಿಂಡಿಮವ"**, ಡಾ. ಕೆ.ಎಸ್. ನಿಸಾರ್ ಅಹಮ್ಮದ್ ಅವರ **"ಜೋಗದ ಸಿರಿ ಬೆಳಕಿನಲ್ಲಿ"** ಹಾಗೂ ಹಂಸಲೇಖ ಅವರ **"ಹುಟ್ಟಿದರೇ ಕನ್ನಡ ನಾಡಿನಲ್ಲಿ ಹುಟ್ಟಬೇಕು"** ಗೀತೆಗಳನ್ನು ಕಂಠಪಾಠ ಮಾಡಿಸಿರುತ್ತಾರೆ.

➢ ದಿನಾಂಕ: 27.10.2021 ರಂದು ಪ್ರಥಮ ಬಿಎ ಹಾಗೂ ಬಿಕಾಂ ವಿದ್ಯಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು. ಕಾಲೇಜಿನ ಪ್ರಾಚಾರ್ಯರಾದ ಡಾ. ಎನ್ ಮಹಾದೇವಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ವಿದ್ಯಾರ್ಥಿಗಳಿಗೆ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಪರಿಚಯಾತ್ಮಕ ಕಿರು ಹೊತ್ತಿಗೆಯನ್ನು ಹಾಗೂ ಸಿಹಿ ವಿತರಿಸಿ ಕಾಲೇಜಿಗೆ ಬರಮಾಡಿಕೊಳ್ಳಲಾಯಿತು.

➢ ದಿನಾಂಕ: 28.10.2021ರ ಗುರುವಾರ ಬೆಳಗ್ಗೆ 11-00 ಗಂಟೆಗೆ ಲಕ್ಷ ಕಂಠಗಳಲ್ಲಿ ಕನ್ನಡ ಸಾಮೂಹಿಕ ಗೀತ ಗಾಯನ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಡಾ. ಕುವೆಂಪು ಅವರ **"ಬಾರಿಸು ಕನ್ನಡ ಡಿಂಡಿಮವ"** ಡಾ. ಕೆ.ಎಸ್. ನಿಸಾರ್ ಅಹಮ್ಮದ್ ಅವರ **"ಜೋಗದ ಸಿರಿ ಬೆಳಕಿನಲ್ಲಿ"** ಹಾಗೂ ಹಂಸಲೇಖ ಅವರ **"ಹುಟ್ಟಿದರೇ ಕನ್ನಡ ನಾಡಿನಲ್ಲಿ ಹುಟ್ಟಬೇಕು"** ಗೀತೆಗಳನ್ನು ಏಕಕಾಲಕ್ಕೆ ಎಲ್ಲಾ ನೌಕರ ವರ್ಗದವರು, ವಿದ್ಯಾರ್ಥಿಗಳು ಒಟ್ಟಾಗಿ

ಸೇರಿ ಹಾಡಲಾಯಿತು. ಇದೇ ಸಂದರ್ಭದಲ್ಲಿ ಕನ್ನಡ ನಾಡಿನ ಜವಬ್ದಾರಿಯುತ ಪ್ರಜೆಯಾಗಿ ನಾನು ಕನ್ನಡದಲ್ಲೇ ಮಾತನಾಡುತ್ತೇನೆ, ಕನ್ನಡದಲ್ಲೇ ಬರೆಯುತ್ತೇನೆ, ನಿತ್ಯ ವ್ಯವಹಾರದಲ್ಲಿ ಕನ್ನಡವನ್ನೆ ಬಳಸುತ್ತೇನೆ, ಕನ್ನಡ ನಾಡಿನಲ್ಲಿ ವಾಸವಾಗಿರುವ ಕನ್ನಡೇತರ ಬಂಧುಗಳಿಗೆ ಪ್ರೀತಿಯಿಂದ ಕನ್ನಡ ಕಲಿಸುತ್ತೇನೆ. ಕನ್ನಡ ನಾಡು ನುಡಿ ಸಂಸ್ಕೃತಿ ಹಾಗೂ ಪರಂಪರೆಯನ್ನು ಉಳಿಸಲು ಬದ್ಧನಾಗಿರುತ್ತೇನೆ ಎಂಬ ಸಂಕಲ್ಪವನ್ನು ಸ್ವೀಕರಿಸಲಾಯಿತು.

2. **ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಗುಂಡ್ಲುಪೇಟೆ**

- ದಿನಾಂಕ: 15.08.2021 ರಂದು ನಮ್ಮ ಕಾಲೇಜಿನ ಸಮುಚ್ಚಯದಲ್ಲಿ **75ನೇ ಸ್ವಾತಂತ್ರ್ಯ ದಿನಾಚರಣೆ** ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಸಮಾರಂಭದಲ್ಲಿ ನಮ್ಮ ವಿಭಾಗದ ಇತಿಹಾಸ ಉಪನ್ಯಾಸಕರಾದ **ಶ್ರೀ ಮಲ್ಲಪ್ಪರವರು** ಸ್ವಾತಂತ್ರ್ಯೋತ್ಸವ ಮುಖ್ಯ ಭಾಷಣಕರರಾಗಿ ಭಾಗವಹಿಸಿರುತ್ತಾರೆ.
- ದಿನಾಂಕ: 21.08.2021 ರಂದು ಪದವಿಪೂರ್ವ ಶಿಕ್ಷಣಇಲಾಖೆಯ ಆದೇಶದಂತೆ ದಿನಾಂಕ: 23.08.2021 ರಂದು ದ್ವಿತೀಯ ಪಿಯುಸಿ ಭೌತಿಕ ತರಗತಿ ಆರಂಭಗೊಳ್ಳುವ ಸಂಬಂಧ ಪಟ್ಟಣದ ಪುರಸಭೆಯ ಸಹಯೋಗದೊಂದಿಗೆ ನಮ್ಮ ಕಾಲೇಜಿನ ಕಾರಿಡಾರ್, ವಿದ್ಯಾರ್ಥಿಗಳ ತರಗತಿ ಕೊಠಡಿ, ಸಿಬ್ಬಂದಿ ಕೊಠಡಿ, ಕಛೇರಿಗಳನ್ನು ಸ್ಯಾನಿಟೈಸ್ ಮಾಡಿಸಲಾಯಿತು.
- ದಿನಾಂಕ: 23.08.2021 ರಂದು ಪ್ರಥಮ ಮತ್ತು ದ್ವಿತೀಯ ಪಿಯುಸಿ ಭೌತಿಕ ತರಗತಿಗಳನ್ನು ಇಲಾಖೆಯ ನಿಯಮಾನುಸಾರ ಪ್ರಾರಂಭಿಸಲಾಯಿತು. ಸಾಂಪ್ರದಾಯಿಕವಾಗಿ ಪೂಜಾ ಕಾರ್ಯಕ್ರಮವನ್ನು ನಡೆಸಿ ವಿದ್ಯಾರ್ಥಿನಿಯರಿಗೆ ಹೂ ಮತ್ತು ಸಿಹಿ ನೀಡಿ ಸ್ವಾಗತಿಸಲಾಯಿತು.
- ದಿನಾಂಕ: 02.09.2021 ರಂದು ಕಾಲೇಜಿನಲ್ಲಿ ಪಟ್ಟಣ ಪೋಲಿಸ್ ಠಾಣಾ ವತಿಯಿಂದ ಸರ್ಕಾರ ಹೊಸದಾಗಿ ಸೇವೆ ಪ್ರಾರಂಭಿಸಿರುವ **112 ಜನ ಸ್ನೇಹಿ ವ್ಯವಸ್ಥೆಯ ಬಗ್ಗೆ** ಮತ್ತು **POCSO ಕಾಯಿದೆ** ಬಗ್ಗೆ ವಿದ್ಯಾರ್ಥಿನಿಯರಿಗೆ ಅರಿವು ಮೂಡಿಸುವ ಸಂಬಂಧ ಕಾಲೇಜಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಪಟ್ಟಣ ಆರಕ್ಷಕ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಶ್ರೀ ರಾಜೇಂದ್ರರವರು ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.
- ದಿನಾಂಕ: 04.09.2021 ರಂದು ಕಾಲೇಜಿನಲ್ಲಿ ಪ್ರಥಮ ಮತ್ತು ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗೆ **CA & ACS ಕೋರ್ಸ್‌ಗಳ** ಬಗ್ಗೆ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು **ಮೈಸೂರಿನ ಶ್ರೀ ಬಿ.ಎ ವಿನಯ್**ರವರಿಂದ ಏರ್ಪಡಿಸಲಾಗಿತ್ತು.
- ದಿನಾಂಕ: 14.09.2021 ರಂದು ಕಾಲೇಜಿನಲ್ಲಿ ವಿದ್ಯಾರ್ಥಿ ಸಂಘದ ಚುನಾವಣೆಯನ್ನು ನಡೆಸಲಾಯಿತು. ಚುನಾವಣೆಯಲ್ಲಿ ಈ ಕೆಳಕಂಡ ವಿದ್ಯಾರ್ಥಿಗಳು ತರಗತಿ ಪ್ರತಿನಿಧಿಗಳಾಗಿ ಆಯ್ಕೆಯಾಗಿರುತ್ತಾರೆ.

**2021-22ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ಸಂಘದ ಚುನಾವಣೆ ಫಲಿತಾಂಶ**

| ಕ್ರ.ಸಂ | ತರಗತಿವಾರು/ಸಂಯೋಜನೆವಾರು | | ಆಯ್ಕೆಯಾದ ವಿದ್ಯಾರ್ಥಿಗಳ ಹೆಸರು |
|---|---|---|---|
| 01 | ಪ್ರಥಮ ಪಿಯುಸಿ | ಕಲಾ ವಿಭಾಗ | ಕು. ತಬಾಸಮ್ |
| | | ವಾಣಿಜ್ಯ ವಿಭಾಗ | ಕು. ಅನೀಸ್ ಫಾತಿಮ |
| 02 | ದ್ವಿತೀಯ ಪಿಯುಸಿ | ಕಲಾ ವಿಭಾಗ | ಕು. ಸ್ಫೂರ್ತಿ |
| | | ವಾಣಿಜ್ಯ ವಿಭಾಗ | ಕು. ಮಾನಸ |

- 2021-22ನೇ ಸಾಲಿಗೆ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷೆಯಾಗಿ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಕು. ಚೈತ್ರ ಹಾಗೂ ಕಾರ್ಯದರ್ಶಿಯಾಗಿ ಕು. ಮೌನ ಪಿ.ಎಸ್ ಮತ್ತು ಕ್ರೀಡಾ ಕಾರ್ಯದರ್ಶಿಯಾಗಿ ಕು. ರೇಣುಕ ಆಯ್ಕೆಯಾಗಿರುತ್ತಾರೆ.
- ದಿನಾಂಕ: 02.10.2021 ರಂದು ಕಾಲೇಜಿನಲ್ಲಿ **'ಗಾಂಧೀ ಜಯಂತಿ'** ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಸದರಿ ಕಾರ್ಯಕ್ರಮಕ್ಕೆ ಕಾಲೇಜಿನ ಎಲ್ಲ ಸಿಬ್ಬಂದಿಗಳು ವರ್ಗದವರು ಮತ್ತು ವಿದ್ಯಾರ್ಥಿಗಳು ಭಾಗವಹಿಸಿದ್ದರು.
- ದಿನಾಂಕ: 12.10.2021 ರಂದು ಕಾಲೇಜಿನಲ್ಲಿ ಚಾಮರಾಜನಗರ ಜಿಲ್ಲಾ ಯುವ ಸ್ಪಂದನ ಕೇಂದ್ರದ **ಶ್ರೀಮತಿ ಸುಜಾತರರಿಂದ** ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಅಪ್ರಾಪ್ತ ಹೆಣ್ಣು ಮಕ್ಕಳ ವಿವಾಹ ನಿಷೇದದ ಕುರಿತು ವಿದ್ಯಾರ್ಥಿಗಳಿಗೆ ಜಾಗೃತಿ ಮೂಡಿಸಿದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.
- ದಿನಾಂಕ: 20.10.2021 ರಂದು ಕಾಲೇಜಿನಲ್ಲಿ ಮಹರ್ಷಿ **'ವಾಲ್ಮೀಕಿ ಜಯಂತಿ'** ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲಾ ಅಧ್ಯಾಪಕ ಮತ್ತು ಅಧ್ಯಾಪಕೇತರ ಸಿಬ್ಬಂದಿಗಳು ಹಾಜರಿದ್ದು, ಕಾರ್ಯಕ್ರಮವನ್ನು ಯಶಸ್ವಿಗೊಳಿಸಿರುತ್ತಾರೆ.
- ದಿನಾಂಕ: 21.10.2021 ರಂದು ಕಾಲೇಜಿನಲ್ಲಿ **"ತಾರುಣ್ಯಾವಸ್ಥೆ ಹದಿಹರೆಯದ ಸಮಸ್ಯೆಗಳು"** ಕುರಿತು ಜಾಗೃತಿ ಅರಿವು ಮೂಡಿಸುವ ಸಂಬಂಧ ಕಾಲೇಜಿನ ವಿದ್ಯಾರ್ಥಿಗಳಿಗೆ **ವೆಬಿನಾರ್ ಕಾರ್ಯಕ್ರಮದಲ್ಲಿ** ಭಾಗವಹಿಸಲು ಅವಕಾಶ ಕಲ್ಪಿಸಲಾಗಿತ್ತು.

### 3. ಜೆಎಸ್ಎಸ್ ಪ್ರೌಢಶಾಲೆ, ಗುಂಡ್ಲುಪೇಟೆ

- ದಿನಾಂಕ: 21.09.2021 ರಂದು ಗುಂಡ್ಲುಪೇಟೆ ಆಯುರ್ವೇದ ಆಸ್ಪತ್ರೆಯ ವೈದ್ಯರುಗಳಾದ ಡಾ. ನಿಶ್ಚಲ ಮತ್ತು ಡಾ. ಗುರುಪ್ರಸಾದ್ ಭಾಗವಹಿಸಿ ಪೋಷಣ್ ಮಾಸಾಚರಣೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಆರೋಗ್ಯಕರ ಆಹಾರ ಸೇವನಾ ಸೂತ್ರಗಳನ್ನು ತಿಳಿಸಿಕೊಟ್ಟರು. ಆಯುರ್ವೇದ ವೈದ್ಯ ಪದ್ಧತಿಯ ಪಂಚಕರ್ಮ ಚಿಕಿತ್ಸೆ ಬಗ್ಗೆ ತಿಳಿಸಿಕೊಟ್ಟರು. ಈ ಸಂದರ್ಭದಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಶಿಕ್ಷಕರಿಗೆ ರೋಗನಿರೋಧಕ ಶಕ್ತಿ ಹೆಚ್ಚಿಸುವ ಮಾತ್ರೆಗಳನ್ನು ಹಾಗೂ ಚವಣ್ ಪ್ರಾಸ್‌ಗಳನ್ನು ವಿತರಿಸಿದರು.
- ದಿನಾಂಕ: 09.10.2021 ರಂದು ತಾಲ್ಲೂಕು ಕಾನೂನುಗಳ ಸೇವಾ ಸಮಿತಿ, ಗುಂಡ್ಲುಪೇಟೆ, ಜಿಲ್ಲಾ ಮಕ್ಕಳ ಘಟಕ ಚಾಮರಾಜನಗರ ಹಾಗೂ ಸಾಧನಾ ಸಂಸ್ಥೆ ಇವರ ಸಂಯುಕ್ತಾಶ್ರಯದಲ್ಲಿ ಮಕ್ಕಳ ರಕ್ಷಣೆಗಾಗಿ ಇರುವ ಕಾಯ್ದೆಗಳ ಬಗ್ಗೆ ಕಾನೂನು ಅರಿವು ಕಾರ್ಯಕ್ರಮ ನಡೆಸಲಾಯಿತು. ಈ ಸಂದರ್ಭದಲ್ಲಿ ನಮ್ಮ ಪ್ರೌಢಶಾಲೆಯ ಮಕ್ಕಳಿಗೆ ಕಾನೂನು ಅರಿವನ್ನು ಕುರಿತು ಉಪನ್ಯಾಸ ನೀಡಲಾಯ್ತು. ಕಾರ್ಯಕ್ರಮದ ಉದ್ಘಾಟನೆಯನ್ನು ಗೌರವಾನ್ವಿತ ನ್ಯಾಯಾಧೀಶರಾದ ಶ್ರೀಮತಿ ಸುಜಾತ.ಎಸ್ ರವರು ನೇರವೇರಿಸಿದರು. ಮುಖ್ಯ ಅತಿಥಿಗಳಾಗಿ ಗೌರವಾನ್ವಿತ ನ್ಯಾಯಾಧೀಶರಾದ ಶ್ರೀ ಹೆಚ್.ಪಿ. ಮೋಹನ್‌ಕುಮಾರ್ ರವರು ವಹಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ನಮ್ಮ ಶಾಲೆಯ ಮುಖ್ಯಶಿಕ್ಷಕರು ವಹಿಸಿದ್ದರು.ಗೌರವಾನ್ವಿತ ನ್ಯಾಯಾಧೀಶರುಗಳು ಕಾರ್ಯಕ್ರಮದ ಯಶಸ್ವಿಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.
- ದಿನಾಂಕ: 22.07.2021 ರಂದು ಗುಂಡ್ಲುಪೇಟೆಯ ಭಾರತ್ ಜ್ಯೂವೆಲರ್ಸ್‌ನ ಮಾಲೀಕರಾದ ಶ್ರೀ ಬೆರೂಲಾಲ್ ಸೇಠ್‌ರವರು ನಮ್ಮ ಶಾಲೆಯ ಆರ್ಥಿಕವಾಗಿ ಹಿಂದುಳಿದಿರುವ 80 ವಿದ್ಯಾರ್ಥಿಗಳಿಗೆ ಯೂನಿಫಾರ್ಮ್ ಮತ್ತು ಶೂಗಳನ್ನು ಉಚಿತವಾಗಿ ನೀಡಿರುತ್ತಾರೆ. ಈ ದಾನಿಗಳು ಪ್ರತಿ ವರ್ಷ ಸೇವಾ ಮನೋಭಾವನೆಯಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಪ್ರೋತ್ಸಾಹವನ್ನು ನೀಡುತ್ತಾ ಬಂದಿರುತ್ತಾರೆ.

4. ಜೆಎಸ್‌ಎಸ್ ಪ್ರೌಢಶಾಲೆ, ಬರಗಿ

- ದಿನಾಂಕ: 15.08.2021 ರಂದು ಸರಳವಾಗಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ಸ್ವಾತಂತ್ರ್ಯಕ್ಕಾಗಿ ಮಡಿದವರನ್ನು ಸ್ಮರಿಸಲಾಯಿತು.
- ದಿನಾಂಕ: 05.09.2021 ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.
- ದಿನಾಂಕ: 15.09.2021 ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವವನ್ನು ಸರಳವಾಗಿ ಆಚರಿಸಲಾಯಿತು. ಶ್ರೀಗಳ ಸಾಮಾಜಿಕ ಮತ್ತು ಶೈಕ್ಷಣಿಕ ಕೊಡುಗೆಗಳನ್ನು ಸ್ಮರಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ತಂಬಾಕು ಸೇವನೆಯಿಂದ ಆರೋಗ್ಯದ ಮೇಲೆ ಉಂಟಾಗುವ ದುಷ್ಪರಿಣಾಮಗಳು ಮತ್ತು ತಂಬಾಕು ನಿಯಂತ್ರಣ ಕಾಯ್ದೆ ಕೋಟಾ-2003ರ ಕುರಿತು ಶಾಲಾ ಅರಿವು ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.
- ದಿನಾಂಕ: 01.10.2021 ರಂದು ರಾಷ್ಟ್ರೀಯ ಬಾಲಸ್ವಾಸ್ಥ್ಯ ಕಾರ್ಯಕ್ರಮದಡಿಯಲ್ಲಿ ವೈದ್ಯಾಧಿಕಾರಿಗಳು ಮತ್ತು ಸಿಬ್ಬಂದಿವರ್ಗದವರು ಶಾಲೆಗೆ ಬಂದು ಕೋವಿಡ್-19 ಮೂರನೇ ಅಲೆಯ ಬಗ್ಗೆ ಮಾಹಿತಿ ಮತ್ತು ಜಾಗೃತಿ ಮೂಡಿಸಲಾಯಿತು. ಈ ಸಂದರ್ಭದಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೂ ಆರೋಗ್ಯ ತಪಾಸಣೆ ಮಾಡಿಸಲಾಯಿತು.
- ದಿನಾಂಕ 02.10.2021 ರಂದು ರಾಷ್ಟ್ರಪಿತ ಮಹಾತ್ಮ ಗಾಂಧಿಜೀಯವರ ಮತ್ತು ಭಾರತದ ಎರಡನೇ ಪ್ರಧಾನ ಮಂತ್ರಿಯಾದ ಲಾಲ್ ಬಹದ್ದೂರ್ ಶಾಸ್ತ್ರಿರವರ ಜಯಂತಿಯನ್ನು ಸರಳವಾಗಿ ಆಚರಿಸಲಾಯಿತು.
- ದಿನಾಂಕ 09.10.2021 ರಂದು ಸ್ವಚ್ಛ ಭಾರತ್ ಮಿಷನ್ (ಗ್ರಾಮೀಣ) ಜಲಜೀವನ್ ಮಿಷನ್ ಕಾರ್ಯಕ್ರಮದಡಿಯಲ್ಲಿ ನೀರಿನ ಸದ್ಬಳಕೆ ಮತ್ತು ನಿರ್ವಹಣೆ, ಅಂತರ್‌ಜಲ ಸಂರಕ್ಷಣೆ ಹಾಗೂ ಮಾಲಿನ್ಯ ಮುಕ್ತ ನೀರನ್ನು ಬೆಳೆಸುವ ವಿಧಾನಗಳ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು.

5. ಜೆಎಸ್‌ಎಸ್ ಪ್ರೌಢಶಾಲೆ, ತೆರಕಣಾಂಬಿ

- ದಿನಾಂಕ: 15.08.2021 ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಶಾಲಾ ಆವರಣದಲ್ಲಿ ಸರಳವಾಗಿ ಆಚರಿಸಲಾಯಿತು.
- ದಿನಾಂಕ: 23.08.2021 ರಂದು 9 ಮತ್ತು 10 ನೇ ತರಗತಿ ವಿದ್ಯಾರ್ಥಿಗಳಿಗೆ ಭೌತಿಕ ತರಗತಿಗಳು ಪ್ರಾರಂಭವಾದವು.
- ದಿನಾಂಕ: 24.08.2021 ಮುಖ್ಯೋಪಾಧ್ಯಾಯರ ಅಧ್ಯಕ್ಷತೆಯಲ್ಲಿ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರ ಮಾಸಿಕ ಸಭೆ ನಡೆಸಿ, ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಜಯಂತಿ ಮಹೋತ್ಸವ ಕಾರ್ಯಕ್ರಮ, ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ, ಶೈಕ್ಷಣಿಕ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಯಿತು.
- ದಿನಾಂಕ: 04.09.2021 ರಂದು ನಮ್ಮ ಶಾಲೆಯಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇ ಜಯಂತಿ ಮಹೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.
- ದಿನಾಂಕ: 05.09.2021 ರಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.
- ದಿನಾಂಕ: 15.09.2021 ರಂದು ಪೋಷಕರ ಸಭೆ ನಡೆಸಿ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಬಗ್ಗೆ ಚರ್ಚಿಸಿ, ಸೂಕ್ತ ಸಲಹೆ ಮತ್ತು ಮಾರ್ಗದರ್ಶನ ನೀಡಲಾಯಿತು.
- ದಿನಾಂಕ: 20.09.2021 ರಿಂದ ದಿನಾಂಕ: 26.09.2021 ರವರೆಗೆ ಮೊದಲ ಕಲಿಕಾ ಸಾಧನಾ ಪರೀಕ್ಷೆಯನ್ನು 8, 9 ಮತ್ತು 10 ನೇ ತರಗತಿಗಳ ವಿದ್ಯಾರ್ಥಿಗಳಿಗೆ ನಡೆಸಲಾಯಿತು ಮತ್ತು ಸಂವಾದ ಕಾರ್ಯಕ್ರಮ ನಡೆಸಲಾಯಿತು.

- ದಿನಾಂಕ: 16.10.2021 ರಂದು ಹಸಿರು ಇಕೋ ಕ್ಲಬ್ ವತಿಯಿಂದ ನಮ್ಮ ಶಾಲೆಯ ಆವರಣದಲ್ಲಿ ಇಕೋ ಕ್ಲಬ್ ಉದ್ಘಾಟನೆ, ವಿಶ್ವ ಓಜೋನ್ ದಿನಾಚರಣೆ ಹಾಗೂ ಪೋಷಣಾ ಅಭಿಯಾನ ಕಾರ್ಯಕ್ರಮ ನಡೆಸಲಾಯಿತು. ಮುಖ್ಯ ಅತಿಥಿಗಳಾಗಿ ಪರಿಸರ ಪ್ರೇಮಿ ಆರ್.ಕೆ. ಮಧು ಬಾಗವಹಿಸಿದ್ದರು.
- ದಿನಾಂಕ: 04.10.2021 ರಂದು ತೆರಕಣಾಂಬಿ ಪೊಲೀಸ್ ಠಾಣೆಯ ವತಿಯಿಂದ ಪೊಲೀಸ್ ಸಪ್ತಾಹ ಕಾರ್ಯಕ್ರಮವನ್ನು ನಡೆಸಿ ನಮ್ಮ ಶಾಲೆಯ ವಿದ್ಯಾರ್ಥಿಗಳಿಗೆ ಸಾರ್ವಜನಿಕವಾಗಿ ಆಗುವ ಅಪರಾಧಗಳ ಬಗ್ಗೆ ಅರಿವು ಮೂಡಿಸಲಾಯಿತು. ಮಕ್ಕಳಿಗೆ ಏನಾದರೂ ತೊಂದರೆಯಾದಲ್ಲಿ 100 ಕ್ಕೆ ಬದಲಾಗಿ 112 ಕ್ಕೆ ಕರೆ ಮಾಡಿ ತಮ್ಮ ದೂರುಗಳನ್ನು ನೀಡುವಂತೆ ಸೂಚಿಸಲಾಯಿತು.
- ದಿನಾಂಕ: 01.10.2021 ರಂದು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ವತಿಯಿಂದ ವಿದ್ಯಾರ್ಥಿಗಳಿಗೆ ಚಿತ್ರಕಲೆ, ಪ್ರಬಂಧ ಸ್ಪರ್ಧೆ, ಚರ್ಚಾ ಸ್ಪರ್ಧೆ ಕಾರ್ಯಕ್ರಮ ಏರ್ಪಡಿಸಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.
- ದಿನಾಂಕ: 02.10.2021 ರಂದು ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀ ಯವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.
- ದಿನಾಂಕ: 10.10.2021 ರಿಂದ ದಿನಾಂಕ: 20.10.2021 ರವರೆಗೆ ದಸರಾ ರಜೆ ನೀಡಲಾಯಿತು. ರಜಾ ಅವಧಿಯಲ್ಲಿ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳ ಶಿಕ್ಷಕರು ಗೃಹಪಾಠ ನೀಡಿದರು.
- ದಿನಾಂಕ: 20.10.2021 ರಂದು ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಆಚರಿಸಲಾಯಿತು.
- ದಿನಾಂಕ: 21.10.2021 ರಂದು ದಸರಾ ರಜೆಯ ನಂತರ ಶಾಲೆ ಪುನರಾರಂಭವಾಯಿತು ಮತ್ತು ಇವತ್ತಿನಿಂದಲೇ ಬಿಸಿಯೂಟ ಪ್ರಾರಂಭಿಸಲಾಯಿತು.

6. **ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆ, ತೆರಕಣಾಂಬಿ**

   - ಸಂಸ್ಕೃತ ಪ್ರಥಮ **I, II,** ಮತ್ತು **III** ನೇ ತರಗತಿಗಳಿಗೆ ಮೊದಲನೇ ಕಿರು ಪರೀಕ್ಷೆ ನಡೆಸಲಾಯಿತು.

ದಿನಾಂಕ: **15.11.2021**

ಸ್ಥಳ: ಜೆಎಸ್‌ಎಸ್ ಪ್ರೌಢಶಾಲೆ, ಬರಗಿ.

ಅಧ್ಯಕ್ಷರು

ಪ್ರಾಚಾರ್ಯರು

ಜೆ.ಎಸ್.ಎಸ್. ಕಲಾ ಮತ್ತು ವಾಣಿಜ್ಯ ಕಾಲೇಜು

ಅಅಅಅ